# ಕಾರ್ಖಾನೆಗೆ ಅತೀತವಾದ ಜಾಗತೀಕರಣ, ಉತ್ಪಾದನೆಯ ಅನೌಪಚಾರಿಕೀಕರಣ ಮತ್ತು ಶ್ರಮದ ಹೊಸ ನೆಲೆಗಳು

ಕಲ್ಯಾಣ್ ಸನ್ಯಾಲ್, ರಾಜೇಶ್ ಭಟ್ಟಾಚಾರ್ಯ

ಕಲ್ಯಾಣ್ ಸನ್ಯಾಲ್ (*kalyan_calu@yahoo.co.in*) ಅವರು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಮತ್ತು ರಾಜೇಶ್ ಭಟ್ಟಾಚಾರ್ಯ (*rajesh2466@gmail.com*) ಅವರು ಆಮ್‌ಹರ್ಸ್ಟ್ನ ಮಸ್ಸಾಚುಸೆಟ್ಸ್ ವಿಶ್ವವಿದ್ಯಾಲಯದಲ್ಲಿದ್ದಾರೆ.

ಪೀಠಿಕೆ:

ಜಾಗತೀಕರಣವು ಶ್ರಮಿಕ ಚಳುವಳಿಗಳ ಮೇಲೆ ಮಾಡಿರುವ ಪರಿಣಾಮದ ಕುರಿತು ಎರಡು ವಿರುದ್ಧಾತ್ಮಕ ಅಭಿಪ್ರಾಯಗಳಿವೆ. ಜಗತ್ತಿನಾದ್ಯಂತ ಕಾರ್ಮಿಕವರ್ಗದ ಚಳವಳಿಗಳನ್ನು ಜಾಗತೀಕರಣವು ಗಣನೀಯವಾಗಿ ದುರ್ಬಲಗೊಳಿಸಿದೆ ಎಂಬ ವಾದ ವ್ಯಾಪಕವಾಗಿದೆ. ಶ್ರಮವು ನಿರ್ದಿಷ್ಟ ಭೌಗೋಳಿಕ ಸ್ಥಳಗಳಲ್ಲಿ ಬಂಧಿಸಲ್ಪಟ್ಟಿರುವುದರಿಂದ ಒಂದು ನಿಶ್ಚಿತ ನೆಲೆಯಿಲ್ಲದ ಬಂಡವಾಳವು ಆರ್ಥಿಕತೆಗಳನ್ನು, ವಿಶೇಷವಾಗಿ ಅಭಿವೃದ್ಧಿಶೀಲ ಆರ್ಥಿಕತೆಗಳನ್ನು ಬಂಡವಾಳದ ಹೊಡೆತಕ್ಕೆ ತುತ್ತಾಗುವಂತೆ ದುರ್ಬಲಗೊಳಿಸಿದೆ-ಬಂಡವಾಳವು ಕೂಲಿ ಮತ್ತು ಮಾನದಂಡಗಳ ದೃಷ್ಟಿಯಿಂದ ಹೆಚ್ಚು ಆಕರ್ಷಕವಾದ ಜಾಗಗಳತ್ತ ಸಾಗುವ ಭಯದಿಂದಾಗಿ ಸ್ಪರ್ಧೆಯು ಪಾತಾಳದೆಡೆಗೆ ಸಾಗುತ್ತಿದೆ. ಶ್ರಮವು ಈಗ 20ನೇ ಶತಮಾನದ ಉತ್ತರಾರ್ಧದಲ್ಲಿ ಇದ್ದ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಸ್ವಚ್ಛಂದವಾಗಿ ಸಾಗಬಲ್ಲ ಜಾಗತಿಕ ಬಂಡವಾಳವಾದವು ಆದೇಶಿತ ನಿಯಮಗಳಿಗೆ ಅಪ್ರತಿರೋಧವಾಗಿ ಹೊಂದಿಕೊಳ್ಳಬೇಕಾಗುತ್ತದೆ.

ಆದರೆ ಈ ದೃಷ್ಟಿಕೋನವು ಅವಿವಾದಿತವಲ್ಲ. ಫೋರ್ಡ್ ಮಾದರಿಯ ಸಾಮೂಹಿಕ ಉತ್ಪಾದನೆಯೊಂದಿಗೆ ಸಂಬಂಧ ಹೊಂದಿದ್ದ ಸಾಂಪ್ರದಾಯಿಕ ಕಾರ್ಮಿಕ ಸಂಘವಾದವನ್ನು ಸಾಧ್ಯವಾಗಿಸಿದ ಪರಿಸ್ಥಿತಿಗಳನ್ನು ಜಾಗತೀಕರಣವು ನಿಸ್ಸಂಶಯವಾಗಿಯೂ ದುರ್ಬಲಗೊಳಿಸಿದ್ದರೂ ಸಹ, ತೀರಾ ಹೊಸ ಸ್ವರೂಪಗಳ ಕಾರ್ಮಿಕ ಚಳುವಳಿಗಳನ್ನು ಕಲ್ಪಿಸಿಕೊಳ್ಳಬಹುದಾದ ಹೊಸ ಕ್ಷೇತ್ರಗಳನ್ನು ಜಾಗತೀಕರಣದ ಶಕ್ತಿಗಳೇ ತೆರೆದಿಟ್ಟಿವೆ ಎಂದು ಬಲವಾಗಿ ವಾದಿಸುವ ವಿರುದ್ಧ ದೃಷ್ಟಿಕೋನವೂ ಇದೆ. ಸಾಂಪ್ರದಾಯಿಕ ತಿಳಿವಳಿಕೆಯ ನಿಟ್ಟಿನ ಕಾರ್ಮಿಕವರ್ಗದ ಶಕ್ತಿಯನ್ನು ದುರ್ಬಲಗೊಳಿಸುವ ಪರಿಸ್ಥಿತಿಗಳನ್ನು ಜಾಗತೀಕರಣವು ಸೃಷ್ಟಿಸಿರಬಹುದು, ಆದರೆ ಅದೇ ಸಮಯದಲ್ಲಿ ಅದು 20ನೇ ಶತಮಾನದ ಜಾಗತೀಕರಣ ಪೂರ್ವದ ಜಗತ್ತು ಅವಕಾಶ ಮಾಡಿಕೊಡದಿದ್ದ ರೀತಿಗಳಲ್ಲಿ ಕಾರ್ಮಿಕವರ್ಗವನ್ನು ಸಬಲೀಕರಿಸುವ ಸಾಧ್ಯತೆಯನ್ನು ಸೃಷ್ಟಿಸಿದೆ. ಸಿಲ್ವರ್ (2003) ಮತ್ತು ವೆಬ್‌ಸ್ಟರ್ ಮತ್ತಿತರರು (2008) ವಾದಿಸುವಂತೆ ಈಗ ಹೊರಹೊಮ್ಮುತ್ತಿರುವ ಮತ್ತು ಕ್ರೋಢೀಕೃತಗೊಳ್ಳುತ್ತಿರುವ ಹೊರಗುತ್ತಿಗೆ(out sourcing) ಮತ್ತು ಉಪ-ಗುತ್ತಿಗೆ(Sub Contract)ಯನ್ನು ಆಧರಿಸಿರುವ ಉತ್ಪಾದನೆಯ ಸಂಕೀರ್ಣ ಜಾಗತಿಕ ಜಾಲವು, ವಾಸ್ತವದಲ್ಲಿ ಜಾಗತಿಕ ಬಂಡಾವಳವನ್ನು, ಉತ್ಪಾದನೆ ಮತ್ತು ವಿತರಣೆಯ ಜಾಗತಿಕ ಪರಿಚಲನೆಯ ಅಡ್ಡಿಗಳಿಗೆ ಹಿಂದೆಂದಿಗಿಂತಲೂ ಹೆಚ್ಚು

ಪಕ್ಕಾಗುವಂತೆ ಮಾಡಿದ್ದು, ಅದರಿಂದಾಗಿ ಕಾರ್ಮಿಕವರ್ಗದ ಚೌಕಾಸಿ ಮಾಡಬಲ್ಲ ಶಕ್ತಿಯನ್ನು ಹೆಚ್ಚಿಸಿದೆ.

ಅನ್ಯಥಾ ಬೆಳಕನ್ನು ಚೆಲ್ಲುವ ಈ ಚರ್ಚೆಯಲ್ಲಿ, ಶ್ರಮವನ್ನು ಕೂಲಿಕೆಲಸವೆಂದು, ಉದ್ಯೋಗವನ್ನು ವೇತನ ಆಧಾರಿತ ಕೆಲಸವೆಂದು ನಿರೂಪಿಸಲಾಗಿದೆ ಎಂಬುದನ್ನು ಗಮನಿಸಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ ಇದು ಬಂಡವಾಳ ಮತ್ತು ಶ್ರಮವನ್ನು ಬೇರ್ಪಡಿಸುವುದನ್ನು ಮೂಲವಾಗಿರಿಸಿಕೊಂಡ ಬಂಡವಾಳವಾದಿ ಉತ್ಪಾದನಾ ಸಂಬಂಧಗಳನ್ನು ಆಧರಿಸಿರುವ ಉದ್ಯೋಗದ ಮೇಲೆ ಪ್ರತ್ಯೇಕವಾಗಿ ಗಮನವನ್ನು ಕೇಂದ್ರೀಕರಿಸಿದೆ. ಆದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಇಂದಿನ ವಾಸ್ತವಿಕತೆಯು, ಶ್ರಮವನ್ನು ಒಂದೇ ಸ್ವರೂಪದಲ್ಲಿ ವ್ಯಾಖ್ಯಾನಿಸುವುದಕ್ಕೆ ಅನುವು ಮಾಡಿಕೊಡುವುದಿಲ್ಲ. ಅನೌಪಚಾರಿಕ ಕ್ಷೇತ್ರವೆಂದು ಕರೆಯಲ್ಪಡುವ ವಲಯದಲ್ಲಿ ಒಳಗೊಳ್ಳಲಾಗಿರುವ ವಿಪರೀತ ದೊಡ್ಡ ಪ್ರಮಾಣದ ಆರ್ಥಿಕ ಚಟುವಟಿಕೆಗಳ ಅಸ್ತಿತ್ವದಿಂದ ಅಭಿವೃದ್ಧಿಶೀಲ ಆರ್ಥಿಕತೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆಯೆಂಬುದು ಈಗ ಸುಪರಿಚಿತವಾಗಿದೆ. ಈ ಆರ್ಥಿಕ ವಲಯದಲ್ಲಿ ಕೆಲಸಗಾರರು ಬಂಡವಾಳಶಾಹಿ ಉತ್ಪಾದನಾ ಸಂಘಟನೆಗಿಂತ ಭಿನ್ನವಾದ ಮಾರ್ಗಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ನಿರ್ದಿಷ್ಟವಾಗಿ ಅನೌಪಚಾರಿಕ ಕ್ಷೇತ್ರದಲ್ಲಿನ ಶ್ರಮದ ಪ್ರಚಲಿತ ಸ್ವರೂಪವು ಸ್ವಯಂ ಉದ್ಯೋಗವಾಗಿದ್ದು, ಅದು ಬಂಡವಾಳದಿಂದ ಶ್ರಮವನ್ನು ಪರಕೀಯಗೊಳಿಸುವುದರ ಮೇಲೆ ಆಧರಿತವಾಗಿದ್ದ ವಾಡಿಕೆಯ ಕೂಲಿಯಾಧಾರಿತ ಉದ್ಯೋಗಕ್ಕಿಂತ ಭಿನ್ನವಾಗಿದೆ.

ದಶಕಗಳ ಹಿಂದೆ ಎ.ವಿ. ಚಯೊನೊವ್‌ರವರ 'ದಿ ಥಿಯರಿ ಆಫ್ ಪೆಸೆಂಟ್ ಎಕಾನಮಿ'ಯನ್ನು ಪರಿಚಯಿಸುತ್ತಾ ಥಿಯೊಡೊರ್ ಶಾನಿನ್‌ರವರು ಹೀಗೆಂದು ಬರೆದಿದ್ದರು.

"ಬಂಡಾವಳವಾದಪೂರ್ವದ ದ್ವೀಪಗಳು 'ಅಭಿವೃದ್ಧಿಶೀಲ ಸಮಾಜಗಳಲ್ಲಿ' ಮಾಯವಾಗುತ್ತಿರುವಂತೆ, ಅದರ ಬದಲಾಗಿ, ಅಲ್ಲಿ ಕಾಣಿಸಿಕೊಳ್ಳುವುದು ಬಹುತೇಕವಾಗಿ 19ನೆಯ ಶತಮಾನದ ಯುರೋಪಿನ ಕೈಗಾರಿಕಾ ಕಾರ್ಮಿಕವರ್ಗವಲ್ಲ, ಬದಲಿಗೆ ಅಳಿದುಳಿದ ಸಾಮಾನ್ಯ ಪ್ರಜೆಗಳ ಸ್ತರಗಳು – ವೃದ್ಧಿಸುತ್ತಿರುವ ಅಲೆಮಾರಿಗಳು, ಅರೆಬರೆ ಉದ್ಯೋಗಸ್ಥ ಕೊಳಚೆ ಪ್ರದೇಶಗಳ ನಿವಾಸಿಗಳು, ಅರೆಕಾಲಿಕ ರೈತರು, ತಿಳಿವಳಿಕೆಯಿಲ್ಲದೆ ಸಂತೃಪ್ತರಾದ ಸಮಾಜದ ಕೆಳವರ್ಗದ ವರ್ತಕರು ಅಥವಾ ತಲೆಹಿಡುಕರು - ಇವರೆಲ್ಲರು- ಬಂಡವಾಳವಾದದ ಅಡಿಯಲ್ಲಿನ ಸಾಮಾಜಿಕ ಆರ್ಥಿಕ ಸ್ಥಿತಿಯ ಇನ್ನೊಂದು ಹೆಚ್ಚುವರಿ-ಬಂಡವಾಳಗಾರ ಮಾದರಿ . . . ಅಲ್ಪ ಸಂಖ್ಯೆಯ ರೈತರು ಮತ್ತು "ಪಾರಂಪರಿಕ" ಕೈಗಾರಿಕಾ ಕಾರ್ಮಿಕವರ್ಗದ ಲೋಕಗಳ ನಿಟ್ಟಿನಲ್ಲಿ, ಚಯಾನೋವ್‌ರವರ ಮೂಲಭೂತ ವಿಧಾನಗಳು ಮತ್ತು ಒಳನೋಟಗಳು ಸವಿವರವಾಗಿ ಸಮೃದ್ಧವೆಂದು ಸಾಬೀತಾಗಬಹುದು, ಆದರೆ ವಾಸ್ತವದಲ್ಲಿ ಅವರ ಕಾಳಜಿಯ ವಿಷಯವಾಗಿದ್ದ ರಷ್ಯಾದ ರೈತಾಪಿ ವರ್ಗವು ಹೆಚ್ಚು ಕಡಿಮೆ ಮಾಯವಾಗಿಬಿಟ್ಟಿದೆ" (23-24).

ಭಾರತದ ಆರ್ಥಿಕತೆಯಲ್ಲಿ ಸುಮಾರು 50%ರಷ್ಟು ಕೃಷಿಯೇತರ ಕೆಲಸಗಾರರಿಗೆ ಉದ್ಯೋಗದಾತನಿಲ್ಲ ಎಂಬುದು, ಅಭಿವೃದ್ಧಿಶೀಲ ರಾಷ್ಟ್ರಗಳ ಕುರಿತಾದ ಶಾನಿನ್‌ರವರ ನಿರೂಪಣೆಗೆ ಸಮರ್ಥನೆಯನ್ನು ಒದಗಿಸುತ್ತದೆ. ಇಂದಿನ ಅಭಿವೃದ್ಧಿಶೀಲ ರಾಷ್ಟ್ರಗಳ

ಬಂಡವಾಳಶಾಹಿ ಆರ್ಥಿಕ ರಚನೆಗಳಲ್ಲಿ, ಶಾನಿನ್‌ರವರು ವಿವರಿಸಿರುವ ಹೆಚ್ಚುವರಿ ಬಂಡವಾಳಶಾಹಿ ಪ್ರದೇಶವು ಹೆಚ್ಚಾಗಿ ಗೋಚರವಾಗುತ್ತಿದೆ. ಅದೇನೂ "ಅರೆಕಾಲಿಕ ಉದ್ಯೋಗಸ್ಥರು ಮತ್ತು ತಲೆಹಿಡುಕರು" ವಾಸಿಸುವ ಅಜ್ಞಾನದ ಪ್ರದೇಶವಲ್ಲ. ಬದಲಿಗೆ ಬಂಡವಾಳಶಾಹಿ ಉತ್ಪಾದನೆಯ ಜಗತ್ತಿಗೆ ಜೀವತುಂಬುವ ನಿಯಮಕ್ಕಿಂತ ಮೂಲಭೂತವಾಗಿ ವಿಭಿನ್ನವಾದ ತರ್ಕದಿಂದ ನಿಯಂತ್ರಿಸಲ್ಪಟ್ಟ ವಾಸ್ತವಿಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುವ ಮೂಲಕ ಸದಾ ಅಸ್ಥಿರತೆಯಿಂದ ಕೂಡಿರುವ ತಮ್ಮ ಅಸ್ತಿತ್ವದ ಭೌತಿಕ ಪರಿಸ್ಥಿತಿಗಳನ್ನು ಜನಸಂಖ್ಯೆಯ ಬೃಹತ್ ಭಾಗವು ಪುನರುತ್ಪಾದಿಸುತ್ತಿದೆಯೆಂಬುದಾಗಿ ಅದು ತನ್ನ ಇರುವಿಕೆಯನ್ನು ಸಾರಿ ಹೇಳುತ್ತಿದೆ.

ಅನೌಪಚಾರಿಕೀಕರಣಕ್ಕೆ ಒಳಗಾದ ಸ್ವಯಂಉದ್ಯೋಗದ ವಿದ್ಯಮಾನವನ್ನು ಮುನ್ನೆಲೆಗೆ ತರುವುದು ಮತ್ತು ಕಾರ್ಮಿಕ ಚಳುವಳಿಗಳ ಸಂಭಾವ್ಯ ಹೊಸ ಸ್ವರೂಪಗಳನ್ನು ಕುರಿತ ಅದರ ಪರಿಣಾಮವನ್ನು ಪರಿಶೋಧಿಸುವುದು ಈ ಪ್ರಬಂಧದ ಉದ್ದೇಶ. ಇದನ್ನು ಮಾಡುವಾಗ ನಾವು ಮನೆಯನ್ನು ಸರಕು ಉತ್ಪಾದನೆಯ ಸ್ಥಳವೆಂಬುದಾಗಿ ಅಂದರೆ, ಮಾರಾಟವಾಗಬಲ್ಲ ಸರಕನ್ನು ಉತ್ಪಾದಿಸಲು ಕುಟುಂಬದ ಶ್ರಮದೊಂದಿಗೆ, ಮನೆಯ ಜನರ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಚಟುವಟಿಕೆಗಳನ್ನು ವಿಶೇಷವಾಗಿ ಗಮನಿಸುತ್ತೇವೆ. ನಗರದ ಅನೌಪಚಾರಿಕ ವಲಯದ ಬಗ್ಗೆ ನಮ್ಮ ಪ್ರಾಥಮಿಕ ಗಮನವಿದ್ದಾಗ್ಯೂ, ವಿಶ್ಲೇಷಣೆಯು ಗ್ರಾಮೀಣ ಕೃಷಿಯೇತರ ಉದ್ಯೋಗವನ್ನೂ ತನ್ನ ವ್ಯಾಪ್ತಿಗೆ ತೆಗೆದುಕೊಳ್ಳುತ್ತದೆ.

## ಜಾಗತೀಕರಣ ಮತ್ತು ಅನೌಪಚಾರಿಕೀಕರಣ

ಅಭಿವೃದ್ಧಿಶೀಲ ಅರ್ಥಿಕತೆಗಳಲ್ಲಿ ಅನೌಪಚಾರಿಕ ವಲಯವು ಸದಾ ಅಸ್ತಿತ್ವದಲ್ಲಿದ್ದಾಗ್ಯೂ, ಜಾಗತೀಕರಣವು ಅನೌಪಚಾರಿಕೀಕರಣವನ್ನು ಉಲ್ಬಣಗೊಳಿಸಿದೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಜಾಗತೀಕರಣದ ಶಕ್ತಿಗಳು ಎರಡು ರೀತಿಗಳಲ್ಲಿ ಅನೌಪಚಾರಿಕೀಕರಣಕ್ಕೆ ಪರಿಸ್ಥಿತಿಗಳನ್ನು ಸೃಷ್ಟಿಸಿವೆ.

ಅ) ವ್ಯಾಪಾರ ಮತ್ತು ಬಂಡವಾಳದ ಹರಿವಿಗೆ ಇದ್ದಂತಹ ತಡೆಗಟ್ಟುಗಳನ್ನು ನಿವಾರಿಸಿದ್ದರಿಂದ ಸರಕು ಮತ್ತು ಬಂಡವಾಳ (ಹಣಕಾಸು ಮತ್ತು ಅಸಲಿ ವಸ್ತುಗಳೆರಡೂ) ರಾಷ್ಟ್ರೀಯ ಗಡಿಗಳನ್ನು ಮೀರಿ ಯಾವ ಅಡೆತಡೆಯೂ ಇಲ್ಲದೆ ಸಾಗಲು ಸಾಧ್ಯವಾಯಿತು. ಜಾಗತಿಕ ಮಟ್ಟದ ಸ್ಪರ್ಧೆಯನ್ನು ಎದುರಿಸಬೇಕಾದ ಕಾರಣ, ಅಭಿವೃದ್ಧಿಶೀಲ ಆರ್ಥಿಕತೆಗಳಲ್ಲಿನ ಔಪಚಾರಿಕ ವಲಯದ ವ್ಯವಹಾರ ಸಂಸ್ಥೆಗಳು ಸ್ಪರ್ಧಾತ್ಮಕ ವೆಚ್ಚ ಕಡಿತದ ಹೋರಾಟದಲ್ಲಿ ತೊಡಗಿವೆ. ಅವುಗಳು ಶ್ರಮ ಮತ್ತು ಪರಿಸರದ ಕುರಿತಾದ ಮಾನದಂಡಗಳಿಗೆ ಸಂಬಂಧಿಸಿದ ವೆಚ್ಚ ಮತ್ತು ವೇತನ ವೆಚ್ಚಗಳು ಗುಣನೀಯವಾಗಿ ಕಡಿಮೆ ಇರುವ ಅನೌಪಚಾರಿಕ ಘಟಕಗಳಿಗೆ ಉತ್ಪಾದನಾ ಪ್ರಕ್ರಿಯೆಗಳನ್ನು ಹೊರಗುತ್ತಿಗೆಯಲ್ಲಿ ನೀಡುವುದರ ಮೇಲೆ ಹೆಚ್ಚಾಗಿ ಅವಲಂಬಿತವಾಗುತ್ತಿವೆ.

ಆ) ಅಗ್ಗದ ಆಮದು ಸರಕುಗಳ ಒಳಹರಿವಿನಿಂದಾಗಿ ಆಮದು ಸರಕುಗಳೊಂದಿಗೆ ಸ್ಪರ್ಧೆಯಲ್ಲಿರುವ ಔಪಚಾರಿಕ ಕ್ಷೇತ್ರದ ಕಾರ್ಖಾನೆಗಳು ಕುಗ್ಗುತ್ತಿವೆ. ಆದರೆ ಈ ನಷ್ಟವನ್ನು ಸರಿತೂಗಿಸುವ ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ರಫ್ತಿನ ಕ್ಷೇತ್ರವು ವಿಫಲವಾಗಿದೆ.

ಅಲ್ಲದೆ, ಜಾಗತಿಕ ಸ್ಪರ್ಧೆಯು ದೇಶೀಯ ಖಾಸಗಿ ಹಾಗೂ ಸರ್ಕಾರಿ ಉದ್ಯಮಗಳು ಶ್ರಮದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಬೃಹತ್ ಪ್ರಮಾಣದಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ನೇರ ಉತ್ಪಾದನಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಒತ್ತಡವನ್ನು ಹೇರಿದೆ. ಇದಲ್ಲದೆ, ಆರ್ಥಿಕ ಶಿಸ್ತು ಮತ್ತು ಹಣದುಬ್ಬರದ ಗುರಿಯ ಮೇಲೆ ಕೇಂದ್ರೀಕರಿಸಿದ ನವಉದಾರವಾದಿಯ ಗಮನವು ಉದ್ಯೋಗಗಳನ್ನು ಸೃಷ್ಟಿಸಬಲ್ಲ ಪ್ರಭುತ್ವದ ಶಕ್ತಿಯನ್ನು ಕುಗ್ಗಿಸಿದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಔಪಚಾರಿಕ ವಲಯದಲ್ಲಿ ಉದ್ಯೋಗ ಸೃಷ್ಟಿಗಿಂತ ವೇಗವಾಗಿ ಉದ್ಯೋಗವು ನಾಶವಾಗಿದ್ದು, ಉದ್ಯೋಗಗಳಿಂದ ಹೊರದೂಡಲ್ಪಟ್ಟವರನ್ನು ಅನೌಪಚಾರಿಕ ಕ್ಷೇತ್ರದಲ್ಲಿ ಜೀವನೋಪಾಯವನ್ನು ಕಂಡುಕೊಳ್ಳಲು ಒತ್ತಾಯಪಡಿಸಿದೆ.

ಅನೌಪಚಾರಿಕೀಕರಣದ ಈ ಎರಡು ಪ್ರಕಾರಗಳು ಅನೌಪಚಾರಿಕ ಆರ್ಥಿಕತೆಯ ವ್ಯಾಪ್ತಿಯ ಎರಡು ವಿಶಿಷ್ಟ ವಲಯಗಳೊಂದಿಗೆ ಸಂಬಂಧವನ್ನು ಹೊಂದಿವೆ. ಮೊದಲನೆಯದು ಹೊರಗುತ್ತಿಗೆ ಮತ್ತು ಉಪ-ಗುತ್ತಿಗೆಯ ಒಂದು ಸಂಕೀರ್ಣ ಜಾಲದೊಂದಿಗೆ ಎರಡನೆಯದರೊಂದಿಗೆ ಸಂಪರ್ಕ ಹೊಂದಿರುವ ಬಂಡವಾಳದ ಆವರ್ತದೊಳಗಿನ ಅನೌಪಚಾರಿಕ ಉತ್ಪಾದನಾ ಚಟುವಟಿಕೆಗಳನ್ನು ವಿಸ್ತರಿಸುತ್ತದೆ; ಎರಡನೆಯದು ಬಂಡವಾಳದ ಆವರ್ತದ ಹೊರಗಿನ ಆರ್ಥಿಕ ಅವಕಾಶವನ್ನು ವಿಸ್ತರಿಸುತ್ತದೆ. ಈ ರೀತಿಯಲ್ಲಿ ಅನೌಪಚಾರಿಕೀಕರಣದ ಎರಡೂ ರೀತಿಗಳಲ್ಲಿ ಫೋರ್ಡ್ ಮಾದರಿಯ ಬಂಡವಾಳ ಮತ್ತು ಶ್ರಮದ ಸಂಬಂಧಗಳು ಹಿಂದುಮುಂದಾಗಿದ್ದರೂ[i] ಅದು, ಬಂಡವಾಳಕ್ಕೆ ಸಂಬಂಧಿಸಿರುವುದರಿಂದ, ಶ್ರಮಿಕ ವರ್ಗದ ಮೇಲೆ ಅವು ವಿಭಿನ್ನ ಪರಿಣಾಮಗಳನ್ನು ಉಂಟು ಮಾಡುತ್ತವೆ. ಬಂಡವಾಳಕ್ಕೆ ಸಂಬಂಧಿಸಿದಂತೆ ಶ್ರಮದ ವಿಭಿನ್ನ ನೆಲೆಗಳು, ಬಂಡವಾಳ-ಶ್ರಮದ ಸಂಬಂಧಗಳಲ್ಲಿ ವೈರುಧ್ಯಗಳ ಬಹುತ್ವವು ಕಂಡುಬರುತ್ತವೆ ಎಂಬುದನ್ನು ಗುರುತಿಸಲು ಕರೆನೀಡುತ್ತವೆ.

ಔಪಚಾರಿಕ ಕ್ಷೇತ್ರದಲ್ಲಿನ ಬಂಡವಾಳವು ಅನೌಪಚಾರಿಕ ಆರ್ಥಿಕತೆಗೆ ಸಂಬಂಧಿಸಿರುವ, ಕಡಿಮೆ ಗುರುತಿಸಲ್ಪಟ್ಟಿದ್ದಾಗ್ಯೂ, ಪ್ರಾಯಶಃ ಹೆಚ್ಚು ಪ್ರಮುಖವೆನಿಸಿದ ಮತ್ತೊಂದು ಮೂರನೆಯ ಪ್ರಕ್ರಿಯೆಯಿದೆ. ಅಭಿವೃದ್ಧಿಶೀಲ ದೇಶಗಳಲ್ಲಿನ ಆರ್ಥಿಕ ಬೆಳವಣಿಗೆಯ ಪಾರಂಪರಿಕ ಮಾದರಿಯು, ಆಧುನಿಕ (ಬಂಡವಾಳಶಾಹಿ) ಆರ್ಥಿಕತೆಯು ಸಾಂಪ್ರದಾಯಿಕ (ಬಂಡವಾಳಶಾಹಿ ಪೂರ್ವ) ಆರ್ಥಿಕತೆಗಳನ್ನು ವಿಘಟಿಸಿ, ಆರ್ಥಿಕ ಸಂಪನ್ಮೂಲಗಳನ್ನು ಮತ್ತು ಕೆಲಸಗಾರರನ್ನು ಸಹ ಪಾರಂಪರಿಕ ಆರ್ಥಿಕತೆಯಿಂದ ಆಧುನಿಕ ಆರ್ಥಿಕತೆಗೆ ವರ್ಗಾಯಿಸುವ ಮೂಲಕ ವಿಸ್ತರಿಸುತ್ತದೆ ಎಂಬ ಪೂರ್ವಕಲ್ಪನೆಯನ್ನು ಆಧರಿಸಿತ್ತು. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿನ ಆರ್ಥಿಕ ಬೆಳವಣಿಗೆಯ ಅನುಭವವು, ಬಂಡವಾಳಶಾಹಿ ಆರ್ಥಿಕತೆಯು ಪಾರಂಪರಿಕ ಆರ್ಥಿಕತೆಯನ್ನು ವಿಘಟಿಸಿ ವಿಸ್ತೃತಗೊಂಡ ನಿಟ್ಟಿನಲ್ಲಿ ಅದು ಸಂಪನ್ಮೂಲಗಳನ್ನು ವರ್ಗಾಯಿಸಿತೇ ಹೊರತು ಕೆಲಸಗಾರರನ್ನಲ್ಲ ಎಂಬುದನ್ನು ತೋರ್ಪಡಿಸುತ್ತದೆ. ಇದರ ಪರಿಣಾಮವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ತಮ್ಮ ಪಾರಂಪರಿಕ ಜೀವನೋಪಾಯಗಳನ್ನು ಕಳೆದುಕೊಂಡಿದ್ದಾಗ್ಯೂ, ಆಧುನಿಕ ವಲಯದಲ್ಲಿ ಒಳಗೊಳ್ಳಲ್ಪಡದೆ, ಆಸ್ತಿಹೀನ ಉತ್ಪಾದಕರ "ಹೆಚ್ಚುವರಿ" ಕಾರ್ಮಿಕ ವರ್ಗವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೊರಹೊಮ್ಮಿತು. ಈ "ಹೆಚ್ಚುವರಿ" ಕಾರ್ಮಿಕ ವರ್ಗದ ಗಣನೀಯ ಭಾಗವು, ಜಗತ್ತಿನ ಅತಿದೊಡ್ಡ ಬದುಕುಳಿದ ಪಾರಂಪರಿಕ (ಬಂಡವಾಳಶಾಹಿ ಪೂರ್ವ) ಆರ್ಥಿಕತೆಯಾದ, ರೈತರ ಉತ್ಪಾದನೆಯು

ಪ್ರಬಲವಾಗಿರುವ ಬೇಸಾಯದ ಕಡೆಗೆ ಮತ್ತೆ ಹೊರಳಿತು. "ಹೆಚ್ಚುವರಿ" ಕಾರ್ಮಿಕ ವರ್ಗದ ಉಳಿದ ಭಾಗವು ಸಣ್ಣಪುಟ್ಟ ಅಪರಂಪರಾಗತ ಬೃಹತ್ ಪ್ರಮಾಣದ ತಯಾರಿಕೆ ಮತ್ತು ಸೇವಾ ಚಟುವಟಿಕೆಗಳಲ್ಲಿ, ಅತ್ಯಂತ ಮುಖ್ಯವಾಗಿ, ಚಿಲ್ಲರೆ ವ್ಯಾಪಾರದ ಮೇಲೆ ಬದುಕುಳಿಯಿತು. "ಹೆಚ್ಚುವರಿ" ಕೆಲಸಗಾರರ ವರ್ಗವು ನೆಲೆಗೊಂಡಿರುವ ಕಡೆಗಳಲ್ಲಿ ಈ ಕೆಳಗಿನ ಆರ್ಥಿಕ ಲಕ್ಷಣಗಳು ಹೊರಹೊಮ್ಮಿದವು: ಬಹುತೇಕವಾಗಿ ಕೌಟುಂಬಿಕ ಶ್ರಮದ ನೆರವನ್ನುಳ್ಳ ಸ್ವಯಂಉದ್ಯೋಗದ ಪ್ರಧಾನತೆ, ಮನೆಯು ಉತ್ಪಾದನೆಯ ಮುಖ್ಯ ಕಾರ್ಯಸ್ಥಳವಾಗುವಿಕೆ, ವಿಶೇಷವಾಗಿ ಕೃಷಿಯೇತರ ಚಟುವಟಿಕೆಗಳಲ್ಲಿ, ಮತ್ತು ಅವೈಯಕ್ತಿಕವಾದ ವಿನಿಮಯ ಸಂಬಂಧಗಳ ಜಾಗದಲ್ಲಿ ಪರಸ್ಪರ ನಂಬಿಕೆ ಮತ್ತು ನೆರವನ್ನು ಹೊಂದಿರುವ ಸಮುದಾಯ ಮತ್ತು ಬಾಂಧವ್ಯದ ಜಾಲಗಳು.

ಔಪಚಾರಿಕ ಕ್ಷೇತ್ರದಲ್ಲಿನ ಸಾರ್ವಜನಿಕ ಮತ್ತು ಖಾಸಗಿ ಕಾರ್ಪೊರೇಟ್ ಉದ್ಯಮಗಳಿಂದ ಅವನ್ನು ವಿಭಿನ್ನವಾಗಿಸಿದ, ಈ ಲಕ್ಷಣಗಳನ್ನು ಹೊಂದಿರುವ ಉದ್ಯಮಗಳನ್ನು ಅನೌಪಚಾರಿಕ ಉದ್ಯಮಗಳು ಎಂದು ಕರೆಯಲಾಯಿತು. ಅನೌಪಚಾರಿಕ ಆರ್ಥಿಕತೆ, ಅಂದರೆ "ಹೆಚ್ಚುವರಿ" ಕೆಲಸಗಾರರ ವರ್ಗದ ಆರ್ಥಿಕತೆಯು, ಬಂಡವಾಳಶಾಹಿ ಆರ್ಥಿಕತೆಯು ತನ್ನ ಸಂಪನ್ಮೂಲಗಳನ್ನು ಸಂರಕ್ಷಿಸಿ, ಜನರನ್ನು ಮಾತ್ರ ಸ್ವೀಕರಿಸದ ಪ್ರಕ್ರಿಯೆಯ ಉತ್ಪನ್ನವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಸನ್ಯಾಲ್‌ರವರು (2007) "ಹೊರಗಿಡುವಿಕೆ" ಎಂದು ಕರೆಯುತ್ತಾರೆ. ಅನೌಪಚಾರಿಕ ಆರ್ಥಿಕತೆಯ ಒಂದು ಭಾಗವು ಉಪ-ಗುತ್ತಿಗೆ ಅಥವಾ ಹೊರಗುತ್ತಿಗೆಯ ಮೂಲಕ ಜಾಗತಿಕ ಅಥವಾ ದೇಶೀಯ ಬಂಡವಾಳಕ್ಕೆ ಸಂಯೋಜಿಸಲ್ಪಡುತ್ತದೆ. ಆದರೆ ಅದರ ದೊಡ್ಡ ಭಾಗವು ಬಂಡವಾಳಶಾಹಿಯೇತರ ಉತ್ಪಾದನಾ ವಲಯದ ಘಟಕವಾಗಿರುತ್ತದೆ.

ಇದಲ್ಲದೆ ಹೊರಗಿರಿಸುವಿಕೆಯು ಬಂಡವಾಳಶಾಹಿ ಆರ್ಥಿಕತೆಯ ಅಂಗಭೂತ ಪ್ರಕ್ರಿಯೆಯೇ ಆಗಿದ್ದು, ಈ ಎರಡನೆಯದರ ಪುನರುತ್ಪಾದನೆ ಮತ್ತು ವಿಸ್ತರಣೆಯು ಅದರ ಹೊರಗಡೆ ಇರುವ ಸಂಪನ್ಮೂಲಗಳ ಮೇಲಿನ ಪುನರಾವರ್ತಿತ ದಾಳಿಯನ್ನು ಒಳಗೊಂಡಿರುತ್ತದೆ. ಜಾಗತೀಕರಣವು ಅತಿ ಕಡಿಮೆ ವೆಚ್ಚದಲ್ಲಿ ವಿಸ್ತೃತಗೊಳ್ಳಬೇಕೆಂಬ ಬಂಡವಾಳಶಾಹಿ ಉದ್ಯಮಗಳ ಮೇಲಿನ ಸ್ಪರ್ಧಾತ್ಮಕ ಒತ್ತಡವನ್ನು ಸಡಿಲಿಸಿ, ಅನೇಕ ಬಾರಿ ಅಂತಹ ಹೊರದೂಡಿಕೆಗೆ ಇರುವ ಸಾಮಾಜಿಕ ಅಡೆತಡೆಗಳನ್ನು ಆಗಾಗ ನಿವಾರಿಸಿ ಈ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತದೆ. ಬಂಡವಾಳಶಾಹಿ ವಲಯದ ಕಡಿಮೆ ವೆಚ್ಚದ ಈ ವಿಸ್ತರಣೆಯು ಆರ್ಥಿಕ ಸಂಪತ್ತನ್ನು ಆಗಾಗ ಒಳಗೊಂಡಿರುತ್ತದೆ – ಅದರಲ್ಲೂ ವಿಶೇಷವಾಗಿ, ಅವು ಅನೌಪಚಾರಿಕ ಆರ್ಥಿಕತೆಯಿಂದ ಔಪಚಾರಿಕ ಆರ್ಥಿಕತೆಯವರೆಗೆ ಒತ್ತಡ ಮತ್ತು ನಿರ್ಬಂಧಗಳ ಮೂಲಕ ಮಾರುಕಟ್ಟೆಯಿಂದ ಅಗ್ಗವಾಗಿ ಮೌಲ್ಯೀಕರಿಸಲ್ಪಟ್ಟಾಗ, ಇದನ್ನು ಕಾಣಬಹುದಾಗಿದೆ. ಉದಾಹರಣೆಗೆ ಹೇಳಬೇಕೆಂದರೆ "ಪರಮ ಸ್ವಾಮ್ಯ"ದ ಕಲಮನ್ನು ಉಪಯೋಗಿಸಿ ಕೈಗಾರಿಕಾ ಯೋಜನೆಗಳಿಗಾಗಿ ರೈತಾಪಿಗಳ ಭೂಮಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಂಡಾಗ, ಬೃಹತ್ ಪ್ರಮಾಣದ ಮೂಲಸೌಕರ್ಯ ಯೋಜನೆಗಳಿಗಾಗಿ ಪಾರಂಪರಿಕ ಆರ್ಥಿಕತೆಗಳನ್ನು ನಾಶಮಾಡಿದಾಗ ಅಥವಾ ನಗರ ನವೀಕರಣ ಯೋಜನೆಗಳಿಗಾಗಿ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವಾಗ ನಡೆಯುವುದು ಇದೇ. ಅದೇನೇ ಇರಲಿ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದಾಗಿ ನವಉದಾರವಾದಿ ಆಳ್ವಿಕೆಯಲ್ಲಿ ಔಪಚಾರಿಕ ಕ್ಷೇತ್ರದಲ್ಲಿನ ಉದ್ಯೋಗ ಸೃಷ್ಟಿಯ ಪ್ರಮಾಣವು ಕಡಿಮೆ ಇರುತ್ತದೆ ಅಥವಾ ಕಡಿಮೆಯಾಗುತ್ತದೆ ಸಹ. ಇದರಿಂದಾಗಿ, ಕಾರ್ಮಿಕರ ವರ್ಗವನ್ನು ಸೇರುವ, ಸಂಪತ್ತಿನಿಂದ

ವಂಚಿತರಾದ ಜನತೆಯು ಔಪಚಾರಿಕ ವಲಯದ ಉದ್ಯಮಗಳಲ್ಲಿನ ಶ್ರಮದ ಬೇಡಿಕೆಗೆ ತುಲನಾತ್ಮಕವಾಗಿ ವಿಪರೀತ ಹೆಚ್ಚುವರಿಯಾಗಿಯೇ ಉಳಿಯುತ್ತಾರೆ. ಅವಕಾಶಗಳಿಂದ ಹೊರಗಿರಿಸಲಾಗುವಿಕೆಯ ಉತ್ಪನ್ನವೆಂಬ ಅನೌಪಚಾರಿಕ ಆರ್ಥಿಕತೆಯ ಕುರಿತಾದ ತಿಳಿವಳಿಕೆಯು ಅದನ್ನು ಬಂಡವಾಳಶಾಹಿ ಅಭಿವೃದ್ಧಿಯ ಕೇಂದ್ರ ಸ್ಥಾನದಲ್ಲಿರಿಸುತ್ತದೆಯಾದರೂ, ಬಂಡವಾಳದ ಪರಿಧಿಯ ಹೊರಭಾಗದಲ್ಲಿರಿಸುತ್ತದೆ. ಈ ಹೊರಭಾಗ(outside)ವು ಬಂಡವಾಳದ ಸಂಚಯದ ಪ್ರಮಾಣಕ್ಕೆ ಅನುಗುಣವಾಗಿ ಮತ್ತು ಅದರೊಂದಿಗೇ ಹಿಗ್ಗುತ್ತಾ ಹೋಗುವಂಥದ್ದು. ನಮ್ಮ ತಿಳಿವಳಿಕೆಯ ಪ್ರಕಾರ ಹೊರಗಿರಿಸುವಿಕೆಯು ಬಂಡವಾಳಶಾಹಿ ಅಭಿವೃದ್ಧಿಯ ಆಳ್ವಿಕೆಯಾದ್ಯಂತ ಇರುತ್ತದೆ. ಅಂದರೆ ಕೇಂದ್ರೀಯ ಯೋಜನಾ ಆರ್ಥಿಕತೆ ಅಥವಾ ಮಾರುಕಟ್ಟೆ ಪ್ರೇರಿತ ಆರ್ಥಿಕತೆಯಾದ್ಯಂತ, ಉಚಿತ ಅಂತರರಾಷ್ಟ್ರೀಯ ವ್ಯಾಪಾರದೊಂದಿಗೆ ಅಥವಾ ರಹಿತವಾಗಿ, ಮತ್ತು ಆರ್ಥಿಕತೆಯ ಪರಮೋಚ್ಚ ಸ್ಥಾನವನ್ನು ರಾಜ್ಯ (ಪ್ರಭುತ್ವ) ಅಥವಾ ಖಾಸಗಿ ಬಂಡವಾಳವು ಆಕ್ರಮಿಸಿದೆಯೇ ಇಲ್ಲವೇ ಎಂಬುದನ್ನು ಪರಿಗಣಿಸದೆ. ವಸಾಹತೋತ್ತರ ಬಂಡವಾಳವಾದವು ಒಂದು ಸಂಕೀರ್ಣ ಆರ್ಥಿಕ ಸಂರಚನೆಯಾಗಿದ್ದು, ಅದು ಅನಿವಾರ್ಯವಾಗಿ, ಬಂಡವಾಳ ಮತ್ತು ಅದರ 'ಬಾಹ್ಯಪರಿಸ್ಥಿತಿ'ಯ ನಡುವಿನ ವೈರುಧ್ಯದಿಂದ ರೂಪಿಸಲ್ಪಟ್ಟಿದೆ ಎಂಬುದನ್ನು ನಾವು ಗುರುತಿಸಿದರೆ ಆಗ ನಾವು ಈ 'ಬಾಹ್ಯಪರಿಸ್ಥಿತಿ'ಯ ಮೇಲಿನ ಅದರ ವಿರುದ್ಧಾತ್ಮಕ ಪರಿಣಾಮಗಳ ನಿಟ್ಟಿನಲ್ಲಿ ಜಾಗತೀಕರಣದ ಬಗ್ಗೆ ಒಂದು ಹೊಸ ತಿಳಿವಳಿಕೆಯನ್ನು ಒದಗಿಸಬಲ್ಲವರಾಗುತ್ತೇವೆ. ಈ ರೀತಿಯಲ್ಲಿ ಜಾಗತೀಕರಣಕ್ಕೊಳಪಟ್ಟ ಬಂಡವಾಳವು, ಹೊರಗುತ್ತಿಗೆ ಮತ್ತು ಉಪ-ಗುತ್ತಿಗೆಯ ಮೂಲಕ ತನ್ನ ಬಾಹ್ಯದ ಒಂದು ಭಾಗವನ್ನು ಸಂಯೋಜಿಸುವ ಮತ್ತು ತನ್ನ ಕೂಲಿ ಕೆಲಸಗಾರರ ವರ್ಗವನ್ನು ಕಡಿತಗೊಳಿಸುವ ಮೂಲಕ ಅವರನ್ನು ಹೊರಗಿರಿಸುವ ಪ್ರಕ್ರಿಯೆಗೆ ಒಳಪಡಿಸುವ ನಿಟ್ಟಿನಲ್ಲಿ ತನ್ನ ಹೊರಗಿನ(ಬಾಹ್ಯ) ಪರಿಸ್ಥಿತಿಯ ಮೇಲೆ ಪರಿಣಾಮ ಬೀರುತ್ತದೆ.

ಮೇಲೆ ಹೇಳಿದ ವಿಶ್ಲೇಷಣೆಯು ಜಾಗತೀಕರಣ ಮತ್ತು ಶ್ರಮದ ಮೇಲಿನ ಅದರ ಪರಿಣಾಮಗಳ ಕುರಿತಾದ ಚರ್ಚೆಗೆ ಒಂದು ಹೊಸ ದೃಷ್ಟಿಕೋನವನ್ನು ಒದಗಿಸುತ್ತದೆ. ಜಾಗತೀಕರಣದ ಪ್ರತಿಪಾದಕರು, ಅದು ಅನೌಪಚಾರಿಕ ಆರ್ಥಿಕತೆಗೆ ಆರ್ಥಿಕತೆಯ ಹೆಚ್ಚು ಚಲನಶೀಲ ಮತ್ತು ಉತ್ಪಾದಕ ಭಾಗದೊಂದಿಗೆ ಒಂದುಗೂಡಲು ಹೊಸ ಅವಕಾಶಗಳನ್ನು ತೆರೆಯುತ್ತದೆ ಎಂದು ವಾದಿಸಿದರೆ, ಅದರ ಟೀಕಾಕಾರರು ಅಂತಹ ಸಂಯೋಜನೆಯ ಅಧೀನಸ್ಥ ಸ್ವರೂಪ ಮತ್ತು ನಿರುದ್ಯೋಗದ ಬೆಳವಣಿಗೆಯ ಬಗ್ಗೆ ಬೊಟ್ಟುಮಾಡುತ್ತಾರೆ. ವಾಗ್ವಾದದ ಪ್ರತಿಯೊಂದು ಭಾಗವು ಜಾಗತಿಕ ಬಂಡವಾಳ ಮತ್ತು ಅದರ ಬಾಹ್ಯದ ನಡುವಿನ ಅಸಾಂಗತ್ಯದ ಪ್ರತಿಯೊಂದು ಅಂಶವನ್ನು ಗಮನಿಸಿದಾಗ್ಯೂ, ಈ ಬಾಹ್ಯದ ಸ್ಥಿತಗೊಳಿಸುವಿಕೆಯು ಸೈದ್ಧಾಂತಿಕ ಮಂಡನೆಯೆನಿಸಿದ್ದು, ಚಾಲ್ತಿಯಲ್ಲಿರುವ ಚರ್ಚೆಗಳಲ್ಲಿ, ಬಹುಮಟ್ಟಿಗೆ ಅನುಪಸ್ಥಿತವಾಗಿದೆ. ವಸಾಹತೋತ್ತರ ಆರ್ಥಿಕತೆ ಎಂಬುದು ಬಂಡವಾಳ ಮತ್ತು ಅದರ ಬಾಹ್ಯ ಎರಡೂ ಸೇರಿರುವ ವಿರೋಧಾತ್ಮಕ ಪೂರ್ಣತೆ ಎಂಬ ನಮ್ಮ ಪರಿಕಲ್ಪನೆಯು (ಅ) ಜಾಗತೀಕರಣದ ಬೆಂಬಲಿಗರು ನಂಬಿರುವ ಆರ್ಥಿಕತೆಯ "ಏಕತ್ವ"ವನ್ನು ವಿರೋಧಿಸುತ್ತದೆ ಮತ್ತು (ಆ) ಅನಭಿವೃದ್ಧಿ ಸ್ಥಿತಿಯ ಸಾಂಪ್ರದಾಯಿಕ ದ್ವೈತವಾದಿ ಸಿದ್ಧಾಂತಗಳಲ್ಲಿನ ಸಾಂಪ್ರದಾಯಿಕ/ಆಧುನಿಕ ಅಥವಾ ಬಂಡವಾಳ ಪೂರ್ವ/ಬಂಡವಾಳ ದ್ವಿಭಜನೆಗಿಂತ ಭಿನ್ನವಾದ ಮೂಲಭೂತ ವಿಚ್ಛಿನ್ನತೆಯನ್ನು

ಆರ್ಥಿಕತೆಯಲ್ಲಿ ಸೃಷ್ಟಿಸುತ್ತದೆ. ನಮ್ಮ ಸಿದ್ಧಾಂತದಲ್ಲಿ ಬಂಡವಾಳ ಮತ್ತು ಅದರ ಬಾಹ್ಯವು ಒಂದನ್ನೊಂದು ಪರಸ್ಪರ ರೂಪಿಸುತ್ತವೆ. ಅಂದರೆ, ನಿಜಕ್ಕೂ ಅವು ಒಂದು ಇನ್ನೊಂದನ್ನು ಅಸ್ತಿತ್ವಕ್ಕೆ ತರುತ್ತವೆ. ಆದ್ದರಿಂದ ಬಂಡವಾಳಶಾಹಿ ಅಭಿವೃದ್ಧಿಯು ಅಂತಹ ದ್ವಿತ್ವವನ್ನು ಇಲ್ಲವಾಗಿಸುವುದು ಸಾಧ್ಯವಿಲ್ಲ. ಹೀಗಾಗಿ ಇಲ್ಲಿ ನಾವು, ಬಂಡವಾಳವಾದಿ ಸಂಚಯದೊಂದಿಗೆ ದ್ವಿತ್ವವು ಕಾಣದಾಗುವ ದ್ವಿವಿಧ ಆರ್ಥಿಕತೆಯ ಪ್ರಮಾಣಿತ ಮಾದರಿಗಳಿಂದ ತೀವ್ರವಾಗಿ ದೂರವಾಗುತ್ತೇವೆ.

## ವಸಾಹತೋತ್ತರ ಆರ್ಥಿಕತೆಯಲ್ಲಿನ ದ್ವಿತ್ವ

ಗರಿಷ್ಠ ಲಾಭಗಳಿಕೆಯ ಉದ್ದೇಶಕ್ಕೆ ಅನುಗುಣವಾಗಿ ಕಾರ್ಮಿಕರನ್ನು ಉದ್ಯೋಗದಲ್ಲಿ ತೊಡಗಿಸಿಕೊಂಡ ಸಣ್ಣ ಆಧುನಿಕ (ಬಂಡವಾಳಶಾಹಿ) ಕ್ಷೇತ್ರವನ್ನು ಮತ್ತು "ಹೆಚ್ಚುವರಿ ಕಾರ್ಮಿಕ ವರ್ಗ"ವನ್ನು ತೊಡಗಿಸಿಕೊಂಡ ವಿಶಾಲ ಸಾಂಪ್ರದಾಯಿಕ (ಬಂಡವಾಳಶಾಹಿ ಪೂರ್ವ) ಕ್ಷೇತ್ರವನ್ನು ಒಳಗೊಂಡ ದ್ವಿತ್ವ ಆರ್ಥಿಕತೆಯ ಸುಪ್ರಸಿದ್ಧ ಮಾದರಿಯನ್ನು ಲೂಯಿಸ್ (1954) ಒದಗಿಸಿದರು. ಕೆಲವೊಂದು ಪರಿಸ್ಥಿತಿಗಳ ಅಡಿಯಲ್ಲಿ[ii]. ಸಾಂಪ್ರದಾಯಿಕ ಕ್ಷೇತ್ರದ ಉತ್ಪಾದನೆಯು ಕುಸಿಯದಂತೆ ಅದರೊಳಗಿನ ಹೆಚ್ಚುವರಿ ಕಾರ್ಮಿಕ ವರ್ಗವನ್ನು ಅದು ಪೂರ್ತಿಯಾಗಿ ನಿಶ್ಶೇಷವಾಗುವವರೆಗೆ ಮತ್ತು ಈ ಪ್ರಕ್ರಿಯೆಯಲ್ಲಿ ಆರ್ಥಿಕತೆಯ ದ್ವಿತ್ವ ಸ್ವರೂಪವು ವಿಘಟನೆಗೊಳ್ಳುವವರೆಗೆ ಹಿಂತೆಗೆದುಕೊಂಡು ಆಧುನಿಕ ಕ್ಷೇತ್ರದಲ್ಲಿ ಬಂಡವಾಳಶಾಹಿ ಸಂಚಯ ಮತ್ತು ಬೆಳವಣಿಗೆ ಜರುಗಬಹುದು.

ನಗರ ನಿರುದ್ಯೋಗದ ಅನಿರ್ಬಂಧಿತ ಪರಿಸ್ಥಿತಿಗಳಲ್ಲಿ ಲೂಯಿಸ್ ಮಾದರಿಯ ಆರ್ಥಿಕತೆಯಲ್ಲಿ ಹಳ್ಳಿ-ಪಟ್ಟಣ ವಲಸೆಯು ಮುಂದುವರೆಯಬಹುದು ಎಂಬುದನ್ನು ಹ್ಯಾರಿಸ್ ಮತ್ತು ಟೊಡಾರೊ (1970) ಗುರುತಿಸಿದರು. "ದುಡಿಯುವ ಬಡಜನರ" ಆರ್ಥಿಕ ಚಟುವಟಿಕೆಗಳ ಪ್ರದೇಶವೆಂದು, ನಗರ "ಅನೌಪಚಾರಿಕ ಆರ್ಥಿಕತೆ"ಯ ಪರಿಕಲ್ಪನೆಯನ್ನು ಹರ್ಟ್ (1973) ಪರಿಚಯಿಸಿದರು. ಸಾಮಾಜಿಕ ಭದ್ರತೆಯ ಸೌಕರ್ಯಗಳು ಬಡರಾಷ್ಟ್ರಗಳಲ್ಲಿ ಇಲ್ಲದಿರುವಾಗ ಹಳ್ಳಿ-ಪಟ್ಟಣ ವಲಸೆಗಾರರು ಮುಕ್ತ ನಿರುದ್ಯೋಗವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಮತ್ತು ಅವರು ಅನೌಪಚಾರಿಕ ಕ್ಷೇತ್ರದಲ್ಲಿ ದುಡಿಯಬೇಕಾಗುತ್ತದೆ ಎಂಬುದನ್ನು ಗುರುತಿಸಲಾಯಿತು. ಗ್ರಾಮೀಣ ಕ್ಷೇತ್ರ, ನಗರದ ಔಪಚಾರಿಕ ಕ್ಷೇತ್ರ, ಔಪಚಾರಿಕ ಕ್ಷೇತ್ರದೊಂದಿಗೆ ಸಂಯೋಜಿತಗೊಂಡಿರುವ ಚಲನಶೀಲ ಅನೌಪಚಾರಿಕ ಉಪ-ಕ್ಷೇತ್ರ ಹಾಗೂ ಅಳಿದುಳಿದ ಕಾರ್ಮಿಕ ವರ್ಗವನ್ನು ಕಡಿಮೆ ಉತ್ಪಾದಕತೆಯಿರುವ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವ ಸಾಂಪ್ರದಾಯಿಕ ಜಡ ಅನೌಪಚಾರಿಕ ಉಪ-ಕ್ಷೇತ್ರ ಎಂಬ ನಾಲ್ಕು ಕ್ಷೇತ್ರಗಳ ನಡುವಿನ ಭಿನ್ನತೆಗಳ ನಿಟ್ಟಿನ ಅಭಿವೃದ್ಧಿಶೀಲ ಆರ್ಥಿಕತೆಯ ವಿಂಗಡಿತ ಮಾದರಿಯನ್ನು ರಾನಿಸ್ ಮತ್ತು ಸ್ಟೂವರ್ಟ್ (1999) ಮಂಡಿಸಿದರು. ಹಳ್ಳಿ-ಪಟ್ಟಣದ ವಲಸೆಯು, ನಗರದ ಅನೌಪಚಾರಿಕ ಕ್ಷೇತ್ರದ ಆವಿರ್ಭಾವಕ್ಕೆ ಕಾರಣವಾಗುತ್ತದೆ. ಔಪಚಾರಿಕ ಕ್ಷೇತ್ರದ ಬೆಳವಣಿಗೆಯು ಉಪ-ಗುತ್ತಿಗೆ ಸಂಪರ್ಕಗಳ ಮೂಲಕ ಚಲನಶೀಲ ಅನೌಪಚಾರಿಕ ಉಪ-ಕ್ಷೇತ್ರವನ್ನು ವರ್ಧಿಸುತ್ತದೆ. ಅನೌಪಚಾರಿಕ ಕ್ಷೇತ್ರದ ಚಲನಶೀಲ ಘಟಕವು ಯಥಾಕ್ರಮದಲ್ಲಿ, ಪಾರಂಪರಿಕ ಜಡ ಅನೌಪಚಾರಿಕ ಉಪ-ಕ್ಷೇತ್ರದಿಂದ ಹೆಚ್ಚುವರಿ ಶ್ರಮವನ್ನು ಸೆಳೆದು ವಿಸ್ತೃತಗೊಳ್ಳುತ್ತದೆ. "ಅವಶ್ಯವಿರುವಷ್ಟು ಎಲ್ಲಾ

ಉದ್ಯೋಗಾವಕಾಶಗಳನ್ನು ಒದಗಿಸಬಲ್ಲ ಒಂದು ವೇಗವಾಗಿ ಬೆಳೆಯುತ್ತಿರುವ ನಗರದ ಔಪಚಾರಿಕ ಕ್ಷೇತ್ರವಿದ್ದರೆ, ಆಗ ಯಾವುದೇ ಅನೌಪಚಾರಿಕ ವಲಯದ ನಿರಂತರ ಅಸ್ತಿತ್ವದ ಅವಶ್ಯಕತೆ ಇರುವುದಿಲ್ಲ" ಎಂದು ರಾನಿಸ್ ಮತ್ತು ಸ್ಟೂವರ್ಟ್ ತೀರ್ಮಾನಿಸುತ್ತಾರೆ (268).

ಲೂಯಿಸ್ ಅವರ ದೃಷ್ಟಿಕೋನದ ಸ್ಥಾಯಿತ್ವದಿಂದಾಗಿ, ಅನೌಪಚಾರಿಕ ಆರ್ಥಿಕತೆಯನ್ನು ಅನೇಕ ಬಾರಿ, ಕಾರ್ಮಿಕರನ್ನು ಔಪಚಾರಿಕ ವಲಯದೊಳಕ್ಕೆ ಸೇರಿಸಿಕೊಳ್ಳುವ ವಿಳಂಬಿತ ಪ್ರಕ್ರಿಯೆಯಲ್ಲಿನ ತಾತ್ಕಾಲಿಕ ಅಡೆತಡೆ ಎಂದು ಅರ್ಥೈಸಿಕೊಳ್ಳಲಾಗಿದೆ. ಹೀಗಾಗಿ ಅನೌಪಚಾರಿಕ ಆರ್ಥಿಕತೆಯನ್ನು ಸಾಮಾನ್ಯವಾಗಿ ಕಲ್ಯಾಣರಾಜ್ಯವಾದಿ ಆಡಳಿತದ ನಿಟ್ಟಿನಲ್ಲಿ ಸಂಬೋಧಿಸಲಾಗಿದ್ದು, ಕಾನೂನಿನ ಶಬ್ದಾವಳಿಯಲ್ಲಿ ಅದನ್ನು ಪರಿಕಲ್ಪಿಸಿಕೊಳ್ಳಲಾಗಿದೆ. ಅನೌಪಚಾರಿಕ ವಲಯದ ಕುರಿತಾಗಿ ಬಹುತೇಕವಾಗಿ ಸಹಭಾಜಿತಗೊಂಡಿರುವ ಕಾರ್ಯಸಂಬಂಧಿತ ವ್ಯಾಖ್ಯೆಯು, ಸಾಮಾನ್ಯವಾಗಿ ಔಪಚಾರಿಕ ವಲಯಕ್ಕೆ ಅನ್ವಯಿಸುವ ನಿಯಂತ್ರಕ ಚೌಕಟ್ಟಿನ ಆಚೆಗಿರುವ ಚಟುವಟಿಕೆಗಳನ್ನು ಪ್ರಸ್ತಾಪಿಸುವುದು ಮುಂದುವರಿದಿದೆ. ಅರ್ಥಾತ್, ಕನಿಷ್ಠ ವೇತನಗಳು, ಗುಣಮಟ್ಟ ನಿಯಂತ್ರಣ, ಪರಿಸರ ಸಂಬಂಧಿ ಮಾನದಂಡಗಳು, ರೂಢಿಗತ ತೆರಿಗೆಗಳು, ವಲಯರಚನೆ ಕಾನೂನುಗಳು, ಭದ್ರತೆ ಮತ್ತು ಆರೋಗ್ಯದ ಮಾನದಂಡಗಳು ಮತ್ತು ಮಕ್ಕಳು ಹಾಗೂ ಮಹಿಳೆಯರ ಕೆಲಸದ ಕುರಿತಾಗಿ ಅನ್ವಯಿಸಲ್ಪಡುವ ವಿಶೇಷ ನಿಯಮಗಳಂತಹ ನಿಯಮಗಳ ಯಾವುದಾದರೂ ಒಂದು ಅಥವಾ ಎಲ್ಲವುಗಳ ಮೇಲೆ ವಿಭಿನ್ನ ರೀತಿಗಳಲ್ಲಿ ಒತ್ತುಕೊಡುವುದನ್ನು ಒಳಗೊಂಡಂತೆ. ಇನ್ನೊಂದು ಭಿನ್ನರೂಪವೆಂದರೆ ಅನೌಪಕಾರಿಕ ಆರ್ಥಿಕತೆಯನ್ನು ಆಗಾಗ್ಗೆ, "ಅಸಂಘಟಿತ" ಕಾರ್ಮಿಕರನ್ನು ಒಳಗೊಂಡ ಉಪ-ಆರ್ಥಿಕತೆ ಎಂದು ಅರ್ಥೈಸುವುದು. ಕಾನೂನುವಾದಿ ದೃಷ್ಟಿಕೋನವು ಅನೌಪಚಾರಿಕ ವಲಯದ ಹೆಚ್ಚುವರಿ-ನ್ಯಾಯಬದ್ಧತೆಯು, ಪ್ರಭುತ್ವದ ಮಟ್ಟದಲ್ಲಿ ಕಲ್ಯಾಣರಾಜ್ಯವಾದಿ ಮಧ್ಯಪ್ರವೇಶಗಳನ್ನು ಕಷ್ಟಕರವಾಗಿಸುತ್ತದೆಯೆಂಬ ಅಭಿಪ್ರಾಯವನ್ನು ಹೊಂದಿದೆ.

ಕನಿಷ್ಠ ವೇತನ ಅಥವಾ ಪರಿಸರ ಸಂಬಂಧಿತ ಮಾನದಂಡಗಳಲ್ಲಿನ ಅತ್ಯಲ್ಪಮಟ್ಟದ ಪರಿಷ್ಕರಣೆಯು ಸೀಮಾರೇಖೆಯಲ್ಲಿರುವ ಚಟುವಟಿಕೆಗಳ ಸ್ಥಾನಮಾನವನ್ನು ಬದಲಾಯಿಸುತ್ತದೆ ಎಂಬುದು ಕಾನೂನುವಾದಿ ದೃಷ್ಟಿಕೋನದ ಸೂಚ್ಯಾರ್ಥವೆನಿಸಿದೆ. ಇದಕ್ಕೆ ಬದಲಾಗಿ, ಸೀಮಾರೇಖೆಯಲ್ಲಿರುವವರ ಸರಾಸರಿ ಆದಾಯದ ಹೆಚ್ಚಳವನ್ನು ಸಾಧ್ಯವಾಗಿಸಿ, ತನ್ಮೂಲಕ ಅವರು ನಿಬಂಧನೆಗಳನ್ನು ಅನುಸರಿಬಹುದಾದ ಒಂದು ನೀತಿಯನ್ನು ರಚಿಸಬಹುದು. ಇಡೀ ಸಮಸ್ಯೆಯನ್ನು ಮಿತಿಯನ್ನು ತಗ್ಗಿಸುವಕ್ಕೆ ಅಥವಾ ಮಿತಿಯ ಮೇಲೇರಿ ದಾಟುವುದಕ್ಕೆ ಸೀಮಿತಗೊಳಿಸಲಾಗುತ್ತದೆ [iii] .ಕಾನೂನುವಾದಿ ದೃಷ್ಟಿಕೋನವು ಆರ್ಥಿಕತೆಯ ಮೂಲಭೂತ "ಏಕತ್ವ'ವನ್ನು ಒಪ್ಪಿಕೊಳ್ಳುತ್ತದೆ ಮತ್ತು ಕಾನೂನಾತ್ಮಕ ಸಿದ್ಧಾಂತದ ಹಂತದಲ್ಲಿ ವಿಚ್ಛಿನ್ನತೆಯನ್ನು ಗುರುತಿಸುತ್ತದೆ.

ಇದಕ್ಕಿಂತ ಭಿನ್ನವಾಗಿ ಮಾರ್ಕ್ಸ್‌ವಾದಿ ಸಿದ್ಧಾಂತಗಳು, ಬಂಡವಾಳಶಾಹಿ, ಅಲ್ಪ ಸರಕು ಉತ್ಪಾದಕ ಮತ್ತು ಊಳಿಗಮಾನ್ಯ ಉತ್ಪಾದನಾ ವಿಧಾನಗಳ ನಿಟ್ಟಿನ ಮೂಲಭೂತ ವಿಭಿನ್ನತೆಗಳನ್ನು ಗುರುತಿಸುತ್ತವೆ. ಹೀಗಾಗಿ ವಸಾಹತೋತ್ತರ ಆರ್ಥಿಕತೆಗಳನ್ನು ಈ ಮೂರು ಪ್ರಧಾನ ಸ್ವರೂಪಗಳು ವಿವಿಧ ಪ್ರಮಾಣಗಳಲ್ಲಿ ಅಸ್ತಿತ್ವದಲ್ಲಿರುವ ಸಂಕೀರ್ಣ ಸಾಮಾಜಿಕ

ರಚನೆಗಳು[iv] ಎಂದು ವಿವರಿಸಲಾಗುತ್ತದೆ. ಅದೇನೇ ಇರಲಿ, ಮಾರ್ಕ್ಸ್‌ವಾದಿ ಸಿದ್ಧಾಂತಗಳಲ್ಲಿರುವ ಪ್ರಧಾನ ಪ್ರವೃತ್ತಿಯೆಂದರೆ, ಅಲ್ಪ ಸರಕು ಉತ್ಪಾದನೆಯನ್ನು ಬಂಡವಾಳಶಾಹಿಪೂರ್ವದ ಅವಶೇಷವೆಂದು ಅಥವಾ ಸಾರ್ವತ್ರಿಕ ಬಂಡವಾಳಶಾಹಿ ಬೆಳವಣಿಗೆಯಲ್ಲಿನ ಸ್ಥಿತ್ಯಂತರ ಲಕ್ಷಣವೆಂದು ಪರಿಗಣಿಸಿ, ಉತ್ಪಾದನಾ ವಿಧಾನಗಳನ್ನು ಐತಿಹಾಸಿಕೀಕರಣಗೊಳಿಸುವುದು.[v]

ಮಾರ್ಕ್ಸ್‌ವಾದಿ ಸೈದ್ಧಾಂತಿಕ ಸಂಪ್ರದಾಯದಲ್ಲಿರುವ ಇನ್ನೊಂದು ಪ್ರವೃತ್ತಿಯೆಂದರೆ 'ಬಾಹ್ಯ'ವನ್ನು ನವಮಾರ್ಕ್ಸ್‌ವಾದಿ ಸಿದ್ಧಾಂತಗಳಲ್ಲಿರುವಂತೆ (ಮೊಸರ್ 1978; ಗೆರಿ 1987) ಅಂತರ್ಗತೀಕರಿಸುವುದು. ವಾಸ್ತವವಾಗಿ, ಅನೌಪಚಾರಿಕ ಅಲ್ಪ ಸರಕು ಉತ್ಪಾದಕರು, ಉಪ-ಗುತ್ತಿಗೆ ಮತ್ತು ಹೊರಗುತ್ತಿಗೆಯಂತಹ ಪ್ರಕ್ರಿಯೆಗಳ ಮೂಲಕ ಔಪಚಾರಿಕ ಕ್ಷೇತ್ರದೊಂದಿಗೆ ಬೆಸೆದುಕೊಂಡಿರುವ "ರೂಪಮರೆಸಿಕೊಂಡ(disguised) ಕೂಲಿ-ಕಾರ್ಮಿಕ"ರೆನಿಸಿದ್ದಾರೆ. ಅವರು ಅಗ್ಗದ ವೇತನ ಸರಕುಗಳನ್ನು ಕಾರ್ಮಿಕರಿಗೆ ಪೂರೈಸುವ ಅಥವಾ ಕಾರ್ಮಿಕರ ಮೀಸಲು ವರ್ಗವನ್ನು ವಿಸ್ತೃತಗೊಳಿಸುವ ಮೂಲಕ ನೈಜ ವೇತನವನ್ನು ಕುಗ್ಗಿಸುತ್ತಾ ಬಂಡವಾಳಶಾಹಿ ವ್ಯವಸ್ಥೆಗೆ ಲಾಭದಾಯಕವಾಗುತ್ತಾರೆ/ನೆರವು ನೀಡುತ್ತಾರೆ. ಹೀಗೆ "ಕೂಲಿ-ಕಾರ್ಮಿಕರು" ಅಥವಾ "ಕಾರ್ಮಿಕರ ಮೀಸಲು ವರ್ಗ" ಎಂಬ ಕಲ್ಪನೆಯನ್ನು ವಿಸ್ತರಿಸುವ ಮೂಲಕ ಅನೌಪಚಾರಿಕ ಅಲ್ಪ ಸರಕು ಉತ್ಪಾದಕರನ್ನು ಬಂಡವಾಳದಲ್ಲಿ ಒಳಗೊಳ್ಳಲಾಗುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ನಾವು ಅನೌಪಚಾರಿಕ ಉತ್ಪಾದಕರನ್ನು, ಲ್ಯಾಟಿನ್ ಅಮೆರಿಕಾದ ಸಿದ್ಧಾಂತಗಳಲ್ಲಿ (ನುನ್-2000, ಕ್ವಿಜಾನೊ ಮತ್ತು ವೆಸ್‌ಟ್‌ವೆಲ್ 1983) "ಅಂಚಿನ ಸಮೂಹ"ವನ್ನು ಹೋಲುವ ಒಂದು "ಹೆಚ್ಚುವರಿ" ಕಾರ್ಮಿಕ ವರ್ಗ ಎಂದು ಗ್ರಹಿಸುತ್ತೇವೆ.

*ಲ್ಯಾಟಿನ್ ಅಮೆರಿಕಾ(ಅಥವಾ ಆಫ್ರಿಕಾ)ದಲ್ಲಿನ ಕಟ್ಟಕಡೆಯ ಭೂರಹಿತ ರೈತನನ್ನು ಸಹ ಬಂಡವಾಳಶಾಹಿ ಶೋಷಣೆಯ ಪುನರುತ್ಪಾದನೆಯ ಭಾಗ ಎಂದು ಪರಿಗಣಿಸುವ ಎಡಪಂಥೀಯವಾದಿ ಅತಿಕ್ರಿಯಾತ್ಮಕ ಸಿದ್ಧಾಂತ ತಿಳಿವಳಿಕೆಯನ್ನು ಪ್ರಶ್ನಿಸುವುದು ನನ್ನ ಅಂಚಿನ ಸಮೂಹ ಸಿದ್ಧಾಂತದ ಉದ್ದೇಶವಾಗಿತ್ತು. ಇದಕ್ಕೆ ವಿರುದ್ಧವಾಗಿ ನಾನು, ಅನೇಕ ಪ್ರದೇಶಗಳಲ್ಲಿ ಒಂದು ಹೆಚ್ಚುವರಿ ಜನಸಂಖ್ಯೆ ಬೆಳೆಯುತ್ತಿದ್ದು, ಅದು ಅತ್ಯುತ್ತಮ ಸನ್ನಿವೇಶದಲ್ಲಿ ಆರ್ಥಿಕತೆಯ ಆಧಿಪತ್ಯದ ವಲಯಕ್ಕೆ ಸಂಪೂರ್ಣವಾಗಿ ಅಪ್ರಸ್ತುತವಾಗಿರುತ್ತಿತ್ತು ಮತ್ತು ಅತಿಕೆಟ್ಟ ಸನ್ನಿವೇಶಗಳಲ್ಲಿ ಅದರ ಭದ್ರತೆಗೇ ಅಪಾಯವನ್ನೊಡ್ಡುತ್ತಿತ್ತು ಎಂಬುದನ್ನು ತೋರಿಸಲು ಪ್ರಯತ್ನಿಸಿದೆ. ಇದು ಸ್ಥಾಪಿತ ವ್ಯವಸ್ಥೆಯ ಎದುರು, ಅಂತಹ ಕಾರ್ಯರಹಿತ ಹೆಚ್ಚುವರಿಗಳು ನಿಷ್ಕ್ರಿಯವಾಗುವುದನ್ನು ನಿರ್ವಹಿಸುವ ರಾಜಕೀಯ ಸಮಸ್ಯೆಯನ್ನು ಮುಂದಿಟ್ಟಿತು (ನುನ್ 2000: 12 ಒತ್ತನ್ನು ಸೇರಿಸಲಾಗಿದೆ).*

ಈ "ಅನಗತ್ಯ" ಕಾರ್ಮಿಕ ವರ್ಗವು ಬಂಡವಾಳವು ಶ್ರಮವನ್ನು ಬಾಹ್ಯೀಕರಿಸುವುದರಿಂದ ಹೊರಹೊಮ್ಮುವ ಉತ್ಪನ್ನವಾಗಿದ್ದು, ಬಂಡವಾಳದ ಬಹಿಷ್ಕರಣೀಯ ವಿಸ್ತರಣೆಯ ಸಾಮಾಜಿಕ ಪ್ರತಿಫಲವಾಗಿರುತ್ತದೆ; ಅದು ತನ್ನ ವಿಸ್ತರಣೆಯ ಬಲಿಪಶುಗಳನ್ನು ಅಂದರೆ ಎಲ್ಲವನ್ನು ಕಳೆದುಕೊಂಡ, ಆಧುನಿಕ ಬಂಡವಾಳವಾದದ ಅವಶೇಷಗಳೆನಿಸಿದ ಅನೌಪಚಾರಿಕ ಉತ್ಪಾದಕರನ್ನು ಬಂಡವಾಳವಾದೇತರ ಬಾಹ್ಯದ ಕೆಳಮಟ್ಟಕ್ಕೆ ಇಳಿಸುತ್ತದೆ ಮತ್ತು ತನ್ಮೂಲಕ

ಆರ್ಥಿಕತೆಯ ಉದ್ದಕ್ಕೂ ಸಾಗುವ ಒಂದು ಮೂಲಭೂತ ದೋಷದ ಗೆರೆಯನ್ನು ಮರುಸೃಷ್ಟಿಸುತ್ತದೆ.

## ಅನೌಪಚಾರಿಕ ಕ್ಷೇತ್ರದ ಗುಣಲಕ್ಷಣ

ಈ ಹೆಚ್ಚುವರಿ ಶ್ರಮಿಕರ ವರ್ಗವು ಈ ಕೆಳಗಿನ ವಿಭಾಗಗಳಿಗಿಂತ ಸ್ಪಷ್ಟವಾಗಿ ಭಿನ್ನವಾಗಿದೆ: (ಅ) ಬಂಡವಾಳವು ಶೋಷಿಸುವ ಕೂಲಿಕೆಲಸಗಾರರು (ಆ) ಅಂಥ ಶೋಷಣೆಯು ಮುಂದುವರೆಯಲು ನೆರವಾಗುವ ಶ್ರಮಿಕರ ಮೀಸಲು ವರ್ಗ ಮತ್ತು (ಇ) ಉಪ-ಗುತ್ತಿಗೆ ಅಥವಾ ಹೊರಗುತ್ತಿಗೆಯ ಮೂಲಕ ಬಂಡವಾಳದೊಂದಿಗೆ ಸಹಬದ್ಧರಾಗಿರುವ, ಮತ್ತು ಯಾರಿಂದ ಬಂಡವಾಳವು ಮಿಗುತಾಯವನ್ನು ಸೆಳೆದುಕೊಳ್ಳುತ್ತದೋ, ಅಂತಹ ಬಂಡಾವಳೇತರ ಉತ್ಪಾದಕರು. ಸಾಂಪ್ರದಾಯಿಕ ಕಾರ್ಮಿಕ ಚಳವಳಿಗಳಲ್ಲಿ ಕೇಂದ್ರಸ್ಥವಾಗಿರುವ ಶೋಷಣೆ ಮತ್ತು ಸುಲಿಗೆಯ ಸಂಬಂಧಗಳಿಗೆ ವಿರುದ್ಧವಾಗಿ ವಸಾಹತೋತ್ತರ ಸಾಮಾಜಿಕ ಪರಿಸರದಲ್ಲಿನ ಹೆಚ್ಚುವರಿ ಶ್ರಮಿಕರ ವರ್ಗವನ್ನು ಸುಪ್ತ ಸಾಮರ್ಥ್ಯವುಳ್ಳ ರಾಜಕೀಯ ಶಕ್ತಿಯಾಗಿ ಗುರುತಿಸಲು ನಾವು ಹೊರಗಿರಿಸುವಿಕೆಯನ್ನು ಮೂರನೆಯ ಸಂಬಂಧವಾಗಿ ನೆಲೆಗೊಳಿಸುತ್ತೇವೆ.

ಬಹುತೇಕ ವಸಾಹತೋತ್ತರ ರಾಷ್ಟ್ರ ಪ್ರಭುತ್ವಗಳ ಮರುಹಂಚಿಕೆ ಸಾಮರ್ಥ್ಯವನ್ನು ಮೀರಿದಂಥ ಪ್ರಮಾಣದಲ್ಲಿ ಹೆಚ್ಚುವರಿ ಶ್ರಮಿಕರ ವರ್ಗವು ಜೀವನೋಪಾಯದ ಸಮಸ್ಯೆಯನ್ನು ಮುಂದಿಡುತ್ತದೆ. ಹೀಗಾಗಿ ಹೆಚ್ಚುವರಿ ಶ್ರಮಿಕರ ವರ್ಗದ ಬದುಕುಳಿಯುವಿಕೆಯನ್ನು ಖಚಿತಪಡಿಸುವ ರೀತಿಯಲ್ಲಿ ಕೆಲಸ ಮಾಡಬಲ್ಲ ಆರ್ಥಿಕ ಅವಕಾಶವೊಂದು ಹೊರಹೊಮ್ಮಬೇಕು. ಈ ಆರ್ಥಿಕ ಅವಕಾಶವು ಜನತೆಯ ಅಗತ್ಯಗಳ ಸುತ್ತ ಸಂಘಟಿತವಾಗಬೇಕು ಮತ್ತು ಆ ಕಾರಣದಿಂದಾಗಿ ಸಂಚಯವು, ಸಾಮಾಜಿಕ ಫಲಿತಾಂಶಗಳನ್ನು ಸಂರಚಿಸುವಂತಹ ಬಂಡವಾಳದ ವಲಯಕ್ಕೆ ಅದು ಹೊರಗಿನದ್ದಾಗಿರಬೇಕು. ಸನ್ಯಾಲ್‌ರವರು (2007) ಬಂಡವಾಳದ ಆವರಣಕ್ಕೆ "ಸಂಚಯದ ಆರ್ಥಿಕತೆ" ಎಂದು ಕರೆಯುತ್ತಾರೆ ಮತ್ತು ಅದರ ಹೊರಗಿನದನ್ನು "ಅಗತ್ಯತೆಯ ಆರ್ಥಿಕತೆ" ಎನ್ನುತ್ತಾರೆ. ಹೆಚ್ಚುವರಿ ಶ್ರಮಿಕ ವರ್ಗವನ್ನು ಆರ್ಥಿಕವಾಗಿ ಜೀವನಾಧಾರದ ಮಟ್ಟಗಳಲ್ಲಿ ಉಳಿಸಿಕೊಳ್ಳಲಾಗುವಂತೆ ಜನತೆಯು ಉತ್ಪಾದನೆ, ವಿತರಣೆ ಮತ್ತು ಪುನರ್ವಿತರಣೆಯ ಹೊಸ ರೀತಿಗಳನ್ನು ಆವಿಷ್ಕರಿಸಿಕೊಳ್ಳುವ ಆರ್ಥಿಕ ಆವರಣವೇ ಅನೌಪಚಾರಿಕ ಆರ್ಥಿಕತೆ.

ಈ "ಅವಶ್ಯಕ-ಆರ್ಥಿಕತೆ"ಯನ್ನು ಅರ್ಥೈಸಿಕೊಳ್ಳುವ ಸಮಾಜ ವಿಜ್ಞಾನಿಗಳು, ಆಧುನಿಕ ಬಂಡವಾಳವಾದದ ಅಡಿಯಲ್ಲಿ ಬಹಿಷ್ಕೃತ ಕಾರ್ಮಿಕರಿಗೆ ಸದಾ ಸಾಂಪ್ರದಾಯಿಕ ಆಶ್ರಯವಾಗಿರುವ ರೈತ ಆರ್ಥಿಕತೆಯತ್ತ ಹಿಂದಿರುಗಿ ನೋಡಿರುವುದು ಅತ್ಯಂತ ಸಹಜವೇ ಆಗಿದೆ. ಹೀಗಾಗಿ ಅನೌಪಚಾರಿಕ ಆರ್ಥಿಕತೆಯು "ರೈತರ ನೈತಿಕ ಆರ್ಥಿಕತೆ"ಯ ಕಲ್ಪನೆಗೆ ಮತ್ತೆ ಜೀವ ತುಂಬುವುದರಲ್ಲಿ ಯಾವ ಅಚ್ಚರಿಯೂ ಇಲ್ಲ. ಸಮಾಜ ವಿಜ್ಞಾನಿ, ಟಿ.ಜಿ. ಮೆಕ್‌ಗೀ (1973) ಅವರು, ನಗರ ಪ್ರದೇಶದ ಅನೌಪಚಾರಿಕ ಉತ್ಪಾದಕರನ್ನು "ಕಂಡುಹಿಡಿದಾಗ" ಅವರನ್ನು "ನಗರಗಳೊಳಗಿನ ರೈತರು" ಎಂದು ಉಲ್ಲೇಖಿಸುತ್ತಾರೆ. "ಅನೌಪಚಾರಿಕ"ರನ್ನು ಕುರಿತ ಯಾವುದು ರೈತರನ್ನು ನಮ್ಮ ನೆನಪಿಗೆ ತರುತ್ತದೆ? ರಷ್ಯಾದ ಸಂದರ್ಭದಲ್ಲಿ ಸುಮಾರು ಒಂದು ಶತಮಾನದ ಹಿಂದೆ ಚಯಾನೊವ್‌ರವರು ರೈತ ಆರ್ಥಿಕತೆಯ ಕುರಿತಾದ ಒಂದು ಸಿದ್ಧಾಂತವನ್ನು

ಮುಂದಿಟ್ಟರು. ರೈತರ ಉತ್ಪಾದನೆಯ ಈ ವಿವರಣೆಯಲ್ಲಿ ಒಂದೆಡೆ ಕುಟುಂಬದ ಅಗತ್ಯಗಳ ಆಧಾರದ ಮೇಲೆ ರೈತ ಸಂಸಾರವು ಉತ್ಪಾದನೆಯ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಮತ್ತು ಇನ್ನೊಂದು ಕಡೆ ಅಂಚಿನಲ್ಲಿನ ನೀರಸವಾದ ಶ್ರಮದ ಆಧಾರದ ಮೇಲೆ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಚಯಾನೊಲ್ ಹೇಳುವ ರೈತ ಕುಟುಂಬದ ಅವಶ್ಯಕತೆಗಳು, ಕುಟುಂಬದ ಸದಸ್ಯರ ಒಂದು ಉಪವಿಭಾಗ ಮಾತ್ರ ಶ್ರಮದಲ್ಲಿ ತೊಡಗಬಹುದಾದಂಥ ಕುಟುಂಬದ ಗಾತ್ರವನ್ನು ಅವಲಂಬಿಸಿದೆ. ಇಡೀ ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು, ಕುಟುಂಬದ ಒಡೆತನದ ಜಮೀನಿನಲ್ಲಿ ದುಡಿಮೆಗಾರ ಸದಸ್ಯರು ಕೆಲಸ ಮಾಡುತ್ತಾರೆ. ಉತ್ಪಾದನೆಯ ಹೆಚ್ಚುವರಿ ಘಟಕದಿಂದ ಮೊದಲ್ಗೊಂಡು, ಒಂದು ಘಂಟೆಯಷ್ಟು ಹೆಚ್ಚುವರಿ ಅವಧಿಯ ನೀರಸ ದುಡಿಮೆಯವರೆಗೆ ಪಡೆದ ಉಪಯೋಗದ ಮಟ್ಟವನ್ನು ಸಮೀಕರಿಸುವ ಮೂಲಕ ವ್ಯಯಿಸಿದ ಶ್ರಮ ಮತ್ತು ಪಡೆದ ಉತ್ಪನ್ನವನ್ನು ನಿರ್ಧರಿಸಬಹುದು. ಚಯಾನೊವ್ ಪ್ರತಿಪಾದಿಸುವ ಮುಖ್ಯ ಅಂಶವೆಂದರೆ, ಬಂಡವಾಳಶಾಹಿ ಉತ್ಪಾದನೆಯೊಂದಿಗೆ ತಳುಕು ಹಾಕಿಕೊಂಡಿರುವ ಆದಾಯಗಳು, ಕೂಲಿಗಳು, ಲಾಭಗಳಿಗೆ ರೈತರ ಉತ್ಪಾದನೆಯ ಕುರಿತಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ಆಧಾರವೆನಿಸಿದ ಲೆಕ್ಕಾಚಾರದಲ್ಲಿ ಯಾವ ಜಾಗವೂ ಇಲ್ಲ.

ಚಯಾನೊವ್‌ರವರ ರೈತರಿಗೂ ಮತ್ತು ಸ್ವಯಂ ಉದ್ಯೋಗವನ್ನು ಆಧರಿಸಿರುವ ಇಂದಿನ ಅನೌಪಚಾರಿಕ ಚಟುವಟಿಕೆಗಳಿಗೂ ನಡುವೆ ಇರುವ ವ್ಯತ್ಯಾಸವೇನೆಂದರೆ, ನಗರ ಪ್ರದೇಶದ ಸಣ್ಣ ಉತ್ಪಾದಕರು ರೈತರಂತೆ "ಸಹಜ ಆರ್ಥಿಕತೆ"ಗೆ ಸೇರಿದವರಲ್ಲ. ಚಯಾನೊವ್‌ರ ರೈತರಿಗಾದರೋ ಶ್ರಮ ಮತ್ತು ಶ್ರಮದ ಸಾಧನಗಳ ಐಕ್ಯತೆ ಇದೆ. ನಗರ ಪ್ರದೇಶದ ಸಣ್ಣ ಉತ್ಪಾದಕರಿಗೆ ಸಂಬಂಧಿಸಿದಂತೆ ಈ ಐಕ್ಯತೆಯು ಸಾಧ್ಯವಾಗುವುದು ಮಾರುಕಟ್ಟೆಯಿಂದ. ಹೀಗಾಗಿ ಅದು ಸಾಲದ ಮೇಲೆ ಅವಲಂಬಿತವಾಗುತ್ತದೆ. ಸಾಂಪ್ರದಾಯಿಕ ರೈತ ಆರ್ಥಿಕತೆಯಲ್ಲಿ ಉಪಯುಕ್ತತೆಯ ಮೌಲ್ಯದ ಉತ್ಪಾದನೆಯೇ ಮುಖ್ಯ ಲಕ್ಷಣವಾದರೆ, ನಗರ ಪ್ರದೇಶದ ಅನೌಪಚಾರಿಕ ಆರ್ಥಿಕತೆಯಲ್ಲಿ ಮಾರುಕಟ್ಟೆಗಾಗಿ ಉತ್ಪಾದಿಸುವುದು ಪ್ರಧಾನವಾಗುತ್ತದೆ. ಇದು ಹಣ ಮತ್ತು ವಿನಿಮಯದ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಬೇರೂರಿರುವ ಆರ್ಥಿಕತೆಯಾಗಿರುತ್ತದೆ.

ಆದರೂ ಸಹ ಈ ಅನೌಪಚಾರಿಕ ಆರ್ಥಿಕತೆಯು ಬದುಕುಳಿಯಲಿಕ್ಕಾಗಿ ಇರುವ ರೂಢ ಪರಿಹಾರವನ್ನು ಅನುಕರಣೆ ಮಾಡುವ ಸಾಮಾಜಿಕ ಕಾರ್ಯರೀತಿಯನ್ನು ಸ್ಥಾಪಿತಗೊಳಿಸಿದೆ. ಅದೆಂದರೆ ಆದಾಯದ ಹಂಚಿಕೆ. ಲಾಭಕ್ಕಿಂತಲೂ ಆದಾಯವನ್ನು ಗರಿಷ್ಠಗೊಳಿಸಿ, ನಂತರ ಕುಟುಂಬದ ಸದಸ್ಯರು ಆದಾಯಕ್ಕೆ ನೀಡಿರುವ ಕಾಣಿಕೆ ಏನೇ ಇರಲಿ ಅವರೆಲ್ಲರಿಗೂ ಸರಾಸರಿ ಉತ್ಪನ್ನವನ್ನು ಹಂಚುವ ಮೂಲಕ ರೈತ ಆರ್ಥಿಕತೆಯು ಹೆಚ್ಚುವರಿ ಶ್ರಮಿಕ ವರ್ಗಕ್ಕೆ ಅವಕಾಶ ಕಲ್ಪಿಸುತ್ತದೆ ಎಂಬುದನ್ನು ಅದು ಸ್ಪಷ್ಟವಾಗಿ ಗುರುತಿಸಿದೆ. ಅನೌಪಚಾರಿಕ ಆರ್ಥಿಕತೆಯ ಹೆಚ್ಚಿನ ಅಸಾಂಪ್ರದಾಯಿಕ ರೂಪಗಳಲ್ಲಿ ಇದೇ ವಿದ್ಯಮಾನವನ್ನು ಗಮನಿಸಲಾಗಿದೆ. ಪ್ರಮಾಣಿತ ಪಠ್ಯಪುಸ್ತಕವೊಂದು ಈ ವಿಷಯವನ್ನು ಪರಿಗಣಿಸುವುದು ಹೀಗೆ.

*ಲಾಭವನ್ನು ಗರಿಷ್ಠೀಕರಿಸುವ ಉದ್ಯಮವೊಂದು, ಉದ್ಯೋಗಿಗಳಿಗೆ ಪಾವತಿಸುವ ಕೂಲಿಯನ್ನು ಆದಾಯದಲ್ಲಿ ಕಳೆದು, ಉಳಿದುದನ್ನು ಉತ್ಪಾದನಾ ವೆಚ್ಚವೆಂದು ಪರಿಗಣಿಸುತ್ತದೆ. ಅಂದರೆ, ಆದಾಯದಿಂದ ಕೂಲಿಯನ್ನು ಕಳೆದು ಅಂತಿಮ ಲಾಭದ ಲೆಕ್ಕಾಚಾರವನ್ನು ಮಾಡುತ್ತದೆ...*

*ಸೀಮಾಂತ ಉತ್ಪಾದಕತೆಯು "ಕೂಲಿ"ಗೆ ಸಮನಾಗುವ ಸ್ತರದ ಆಚೆಗೂ ಕೌಟುಂಬಿಕ ಉದ್ಯಮವು ಶ್ರಮವನ್ನು ತೊಡಗಿಸಿಕೊಳ್ಳಬಹುದು. ಏಕೆಂದರೆ ಈ ಸಂದರ್ಭದಲ್ಲಿ ಕೂಲಿಯು ನಿಜವಾಗಿ ಕೂಲಿಯಲ್ಲವೇ ಅಲ್ಲ. ಬದಲಿಗೆ ಜಮೀನಿನ ಸರಾಸರಿ ಉತ್ಪನ್ನವಾಗಿರುತ್ತದೆ...*

*ಆದಾಯವನ್ನು ಹಂಚಿಕೊಳ್ಳುವುದು ಕೇವಲ ಕೃಷಿ ಸಂಬಂಧಿ ವಿದ್ಯಮಾನವಲ್ಲ ಮತ್ತು ಕೇವಲ ಕುಟುಂಬಗಳಲ್ಲಿ ಘಟಿಸುವಂಥದ್ದಲ್ಲ. ಇದು ನಗರ ಪ್ರದೇಶದಲ್ಲಿನ ಅನೌಪಚಾರಿಕ ವಲಯದಲ್ಲೂ ಕಾಣಸಿಗುವುದು ಅಪರೂಪದ ಸಂಗತಿಯೇನಲ್ಲ. ಹೀಗಾಗಿ ನೆರೆಹೊರೆಯಲ್ಲಿನ ಅಂಗಡಿಯನ್ನು ಕೂಡುಕುಟುಂಬವೊಂದು ನಿರ್ವಹಿಸುತ್ತದೆ. ಅದರ ಆದಾಯವು ಮಕ್ಕಳ ನಡುವೆ ಹಂಚಲ್ಪಡುತ್ತಿರುತ್ತದೆ. ಒಬ್ಬ ಟ್ಯಾಕ್ಸಿ ಚಾಲಕನು ವಾಹನ ಚಾಲನೆಯನ್ನು ಸ್ನೇಹಿತನೊಂದಿಗೆ ಹಂಚಿಕೊಳ್ಳಬಹುದು. ಜನಜಂಗುಳಿಯಿರುವ ಬಸ್ ಒಂದರ ನಿರ್ವಾಹಕನು ಟಿಕೆಟ್ ಸಂಗ್ರಹಣೆಯ ತನ್ನ ಕೆಲಸವೊಂದರ ಭಾಗವನ್ನು ತನ್ನ ಸೋದರಳಿಯನಿಗೆ ಉಪ-ಗುತ್ತಿಗೆ ನೀಡಬಹುದು (ರೇ 1999: 357).*

ನವಶಾಸ್ತ್ರೀಯ ಅರ್ಥಶಾಸ್ತ್ರವು ಆರ್ಥಿಕ ಕಾರಕ(agent)ವೊಂದನ್ನು ಒಂದು ಉದ್ದೇಶಬದ್ಧ ಕಾರ್ಯದೊಂದಿಗೆ ನಿಗದಿಪಡಿಸುವ ರೀತಿಯಲ್ಲಿ ನಾವು "ಅವಶ್ಯಕತೆ" ಮತ್ತು "ಸಂಚಯ"ಗಳು ಅನೌಪಚಾರಿಕ ಮತ್ತು ಔಪಚಾರಿಕ ಉಪಕ್ರಮದ ಉದ್ದೇಶಗಳೆಂದು ನಿರ್ವಹಿಸಬೇಕಿಲ್ಲ ಎಂಬುದನ್ನು ನಾವು ತಪ್ಪದೆ ಹೇಳಬೇಕು. ಬಂಡವಾಳಶಾಹಿ ಉದ್ಯಮದ ಸಂಚಯವು ಸ್ಪರ್ಧೆಯ ಆರ್ಥಿಕ ಶಕ್ತಿಗಳಿಗೆ ಪ್ರತಿಕ್ರಿಯೆಯಾಗಿರುತ್ತದೆ ಎಂಬುದನ್ನು ಮಾರ್ಕ್ಸ್ ಯಥೇಷ್ಟವಾಗಿ ಸ್ಪಷ್ಟಪಡಿಸಿದರು.[vi] ಅದೇ ರೀತಿಯಲ್ಲಿ "ಹೊರಗಿನ ಪ್ರತಿರೋಧಿ ನಿಯಮಗಳು," ಅನೌಪಚಾರಿಕ ಉತ್ಪಾದಕರನ್ನು, ತಮ್ಮ ಸದಸ್ಯರ ಆರ್ಥಿಕ ಜೀವನಾಧಾರದ ಖಾತರಿಗಾಗಿ ಆರ್ಥಿಕ ಅವಕಾಶವನ್ನು ಸಂಘಟಿಸುವಂತೆ ಒತ್ತಾಯಿಸುತ್ತವೆ. ಬಂಡವಾಳದ ಸಂಚಯದ ಜೊತೆಯಲ್ಲೇ ಉಂಟಾಗುವ ಆಸ್ತಿ ಕಳೆದುಕೊಳ್ಳುವ ಪ್ರಕ್ರಿಯೆಯ ಫಲವಾಗಿ, ಹೆಚ್ಚುವರಿ ಶ್ರಮಿಕ ವರ್ಗದ ನಿರಂತರ ಪುನರ್‌ಸೃಷ್ಟಿಯಿಂದಾಗಿ, ಅವರಿಗೆ ಅನೌಪಚಾರಿಕ ಆರ್ಥಿಕತೆಯು ಉಳಿಕೆಯ ಸಂಪನ್ಮೂಲದ ಆಧಾರದಲ್ಲಿ ಅವಕಾಶವನ್ನು ಒದಗಿಸಬೇಕಾಗುತ್ತದೆ. ಸಂಪನ್ಮೂಲದ ತಳಹದಿಯ ಮೇಲೆ ಸರಾಸರಿ ಉತ್ಪನ್ನವಾಗಿ ಉತ್ಪಾದಿಸಲಾದ ಒಟ್ಟು ಆದಾಯವನ್ನು ತನ್ನ ಸದಸ್ಯರ ನಡುವೆ ಹಂಚುವ ಮೂಲಕ, ಈ ಸಾಮಾಜಿಕ ಸಂದರ್ಭಕ್ಕೆ ಅನೌಪಚಾರಿಕ ಆರ್ಥಿಕತೆಯು ಪ್ರತಿಕ್ರಿಯಿಸುತ್ತದೆ. ಅನೌಪಚಾರಿಕ ಆರ್ಥಿಕತೆಯ ಈ ಕಾರ್ಯರೀತಿಯು "ಅವಶ್ಯಕತೆ"ಯನ್ನು ಸಮಕಾಲೀನ ಸಣ್ಣ ಉತ್ಪಾದಕರ ಆರ್ಥಿಕತೆಯ ಸಂಘಟನಾತ್ಮಕ/ರಚನಾತ್ಮಕ ತತ್ವವನ್ನಾಗಿ ಸ್ಥಾಪಿಸುತ್ತದೆ. ನಾವು ಈ ಆವರಣವನ್ನೇ "ಚಯಾನೊವ್‌ವಾದಿ ಬಂಡವಾಳದ ಹೊರಭಾಗ" ಎಂದು ಕರೆಯುತ್ತೇವೆ.

ಅನೌಪಚಾರಿಕ ಆರ್ಥಿಕತೆಯು ಹೆಚ್ಚುವರಿ ಶ್ರಮಿಕ ವರ್ಗವನ್ನು ಸ್ಪಂಜಿನಂತೆ ಹೀರಿಕೊಳ್ಳುವುದರಿಂದ ಮುಕ್ತ ಪ್ರವೇಶವು ಅದರ ಗುಣಲಕ್ಷಣವಾಗಿರುತ್ತದೆ. ಆದರೆ ಅದು ಸರಾಸರಿ ಉತ್ಪನ್ನವು ಜೀವನಾಧಾರ ಮಟ್ಟದಲ್ಲಿರುವವರೆಗೆ ಮಾತ್ರ. ಇನ್ನಷ್ಟು ಶ್ರಮಿಕರು ಪ್ರವೇಶಿಸಿದಲ್ಲಿ ಅದು ಅನೌಪಚಾರಿಕ ಆರ್ಥಿಕತೆಯ ಸಾಮಾಜಿಕ ಮರುಉತ್ಪಾದನೆಯನ್ನೇ ತೊಂದರೆಗೀಡುಮಾಡುತ್ತದೆ. ಭಾರತದ ಕೃಷಿಯ ಸಮಕಾಲೀನ ಬಿಕ್ಕಟ್ಟು ಅಂತಹ ನಿರ್ಣಾಯಕ

ಘಟ್ಟವನ್ನು ಸೂಚಿಸುತ್ತದೆ. ಇದರ ಫಲಿತಾಂಶವಾಗಿ "ಅವಶ್ಯಕತೆ-ಆರ್ಥಿಕತೆ"ಯ ಇನ್ನೊಂದು ಭಾಗವಾದ ಗ್ರಾಮೀಣ ಕೃಷಿಯೇತರ ವಲಯವು ಹೆಚ್ಚುವರಿ ಶ್ರಮಿಕ ವರ್ಗದ ಭಾಗವೊಂದಕ್ಕೆ ಅವಕಾಶ ಮಾಡಿಕೊಡಲು ವಿಸ್ತೃತಗೊಳ್ಳುತ್ತದೆ. ಅದೇ ಸಮಯದಲ್ಲಿ ಅದರ ಉಳಿದ ಭಾಗವನ್ನು ಪ್ರಧಾನವಾಗಿ ನಗರ ಪ್ರದೇಶದ ಅನೌಪಚಾರಿಕ ಆರ್ಥಿಕತೆಯು ಒಳಗೊಳ್ಳುತ್ತದೆ. ಸಮಕಾಲೀನ ವಸಾಹತೋತ್ತರ ಬಂಡವಾಳವಾದವು, ಬಂಡವಾಳ ಮತ್ತು ಚಯೊನೊವ್ ಬಾಹ್ಯಗಳ ಸಂಕೀರ್ಣದ ಒಂದು ಕೊನೆಯಿಲ್ಲದ ಪುನರುತ್ಪಾದನೆಯೇ ಆಗಿದೆ.

## ಜಾಗತೀಕರಣ ಮತ್ತು ಭಾರತೀಯ ಆರ್ಥಿಕತೆಯಲ್ಲಿ ಶ್ರಮದ ನೆಲೆಗಳು

ಭಾರತೀಯ ಸನ್ನಿವೇಶದಲ್ಲಿ ಶ್ರಮದ ಪ್ರತಿಯೊಂದು ನೆಲೆಯನ್ನೂ ಜಾಗತೀಕರಣವು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಗುರುತಿಸಲು ಕಾರ್ಮಿಕ ವರ್ಗದ ವಿಘಟಿತ ಸ್ವರೂಪವೊಂದನ್ನು ನಾವು ಉಪಯೋಗಿಸುತ್ತೇವೆ. ಈ ಕೆಳಗಿನ ಮೂರು ಶ್ರೇಣಿಗಳನ್ನು ನಾವು ವರ್ಗೀಕರಣಕ್ಕಾಗಿ ಪರಿಗಣಿಸುತ್ತೇವೆ: (ಅ) ಬಂಡವಾಳಶಾಹಿ ಉತ್ಪಾದನೆಯಲ್ಲಿ ನೇರವಾಗಿ ಕೂಲಿಕಾರ್ಮಿಕರಾಗಿರುವವರು. (ಆ) ಉಪ-ಗುತ್ತಿಗೆ ಮತ್ತು ಹೊರಗುತ್ತಿಗೆಯ ಮೂಲಕ ಔಪಚಾರಿಕ ಆರ್ಥಿಕತೆಯಲ್ಲಿರುವ ಬಂಡವಾಳಶಾಹಿ ಉದ್ಯಮಗಳೊಂದಿಗೆ ಸಂಬದ್ಧವಾಗಿರುವ ಅನೌಪಚಾರಿಕ ಆರ್ಥಿಕತೆಗಳಲ್ಲಿನ ಕಾರ್ಮಿಕ ವರ್ಗ (ಕ) ಬಂಡವಾಳದ ಪರಿಧಿಯ ಹೊರಗಿರುವ ಅನೌಪಚಾರಿಕ ಉದ್ಯಮಗಳಲ್ಲಿರುವ ಶ್ರಮಿಕ ವರ್ಗ. ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳು ಕೂಲಿ ಕೆಲಸಗಾರರಲ್ಲಿ ಬಂಡವಾಳಶಾಹಿ ಕೃಷಿ ಕ್ಷೇತ್ರಗಳಲ್ಲಿರುವ ಕೆಲಸಗಾರರು, ಸಾರ್ವಜನಿಕ ಉದ್ಯಮಗಳಲ್ಲಿನ ನೌಕರರು ಮತ್ತು ಖಾಸಗಿ ಕ್ಷೇತ್ರದಲ್ಲಿನ ಕೃಷಿಯೇತರ ಕೆಲಸಗಾರರನ್ನು ಒಳಗೊಂಡಿವೆ. ಕಾರ್ಮಿಕ ವರ್ಗದ ಎರಡನೆ ಶ್ರೇಣಿಯು ಮುಖ್ಯವಾಗಿ, ಗ್ರಾಮೀಣ ಕೃಷಿಯೇತರ ಕೆಲಸಗಾರರ ಭಾಗವೊಂದನ್ನು ಮತ್ತು ಬಂಡವಾಳಶಾಹಿ ಆರ್ಥಿಕತೆಯೊಂದಿಗೆ ಉಪ-ಗುತ್ತಿಗೆಯ ಮೂಲಕ ಸಂಬದ್ಧಗೊಂಡಿರುವ ಕೃಷಿಯೇತರ ಅನೌಪಚಾರಿಕ ಉದ್ಯಮಗಳಲ್ಲಿರುವ ನಗರದ ಅನೌಪಚಾರಿಕ ಕಾರ್ಮಿಕರು ಮತ್ತು ಅದೇ ರೀತಿಯಲ್ಲಿ ಗುತ್ತಿಗೆ ಕೃಷಿಯ ಮೂಲಕ ಕೃಷಿ-ವ್ಯಾಪಾರದ ಉದ್ಯಮಗಳೊಂದಿಗೆ ಸಂಬದ್ಧಗೊಂಡಿರುವ ಕೃಷಿ ಶ್ರಮಿಕ ವರ್ಗವನ್ನು ಹೊಂದಿದೆ. ಶ್ರಮಿಕ ವರ್ಗದ ಮೂರನೆಯ ಶ್ರೇಣಿಯು ಹೆಚ್ಚುವರಿ ಕೆಲಸಗಾರರೆಂದು ನಾವು ತಿಳಿದುಕೊಂಡಿರುವವರನ್ನು ಮತ್ತು ಚಯಾನೊವ್‌ವಾದಿ ಬಂಡವಾಳದ ಹೊರಭಾಗದಲ್ಲಿನ ಜನರನ್ನು ಒಳಗೊಂಡಿದೆ. ಔಪಚಾರಿಕ ಕೃಷಿಯೊಂದಿಗೆ ಯಾವುದೇ ನೇರ ಸಂಬದ್ಧತೆಗಳಿಲ್ಲದ ಗ್ರಾಮೀಣ ಕೃಷಿಯೇತರ ಮತ್ತು ನಗರ ಅನೌಪಚಾರಿಕ ಕಾರ್ಮಿಕ ಬಲವನ್ನು ಅದು ರೂಪಿಸುತ್ತದೆ.

ಭಾರತೀಯ ಸನ್ನಿವೇಶದಲ್ಲಿ ಜಾಗತೀಕರಣವು ಶ್ರಮಿಕ ವರ್ಗದ ಈ ಮೂರರಲ್ಲಿ, ಪ್ರತಿಯೊಂದು ಶ್ರೇಣಿಯ ಮೇಲೆಯೂ ತನ್ನದೇ ಆದ ವಿಶಿಷ್ಟ ಪರಿಣಾಮವನ್ನು ಬೀರುತ್ತದೆ. ಈಗಾಗಲೇ ಹೇಳಿರುವ ಕಾರಣಗಳಿಂದಾಗಿ ಜಾಗತೀಕರಣದ ಶಕ್ತಿಗಳು ಮೊದಲನೆಯ ಶ್ರೇಣಿಯಲ್ಲಿ ಉದ್ಯೋಗಗಳ ಬೆಳವಣಿಗೆಗೆ ನಿರ್ಬಂಧವನ್ನೊಡ್ಡಿವೆ. 1999ರಿಂದ 2005ರವರೆಗಿನ ಅವಧಿಯಲ್ಲಿ 1999ರಲ್ಲಿ 19.058 ಮಿಲಿಯನ್‌ನಿಂದ 2005ರಲ್ಲಿ 18.007 ಮಿಲಿಯನ್‌ವರೆಗೆ, ಸಾರ್ವಜನಿಕ ವಲಯದ ಉದ್ಯೋಗಗಳು ಸತತವಾಗಿ ಕೊನೆಗೊಳ್ಳುತ್ತಿವೆ (ಆರ್ಥಿಕ ಸರ್ವೇಕ್ಷಣೆ, 2007-08). ಔಪಚಾರಿಕ ವಲಯದಲ್ಲಿ ಖಾಸಗಿ ಉದ್ಯಮಗಳು ಪೂರ್ತಿಯಾಗಿ ರಕ್ಷಣೆ ಇಲ್ಲದ ನಿಯತವಾದ, ತಾತ್ಕಾಲಿಕ ಅಥವಾ ಗುತ್ತಿಗೆ ಕೂಲಿ

ಕೆಲಸಗಾರರಿರುವ ವಿಭಾಗಗಳಲ್ಲಿ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸಿದ್ದು, ಔಪಚಾರಿಕ ವಲಯದೊಳಗಿನ ಅನೌಪಚಾರಿಕ ಉದ್ಯೋಗಗಳನ್ನು ರೂಪಿಸಿವೆ. ಬೆಳೆಯುತ್ತಿರುವ ಶ್ರಮಿಕ ವರ್ಗದ ಬಹುದೊಡ್ಡ ಭಾಗಕ್ಕೆ ಉಳಿದ ಎರಡು ಶ್ರೇಣಿಗಳಲ್ಲಿ ಅವಕಾಶಗಳು ಒದಗಿವೆ. ಹೆಚ್ಚುವರಿ ಶ್ರಮಿಕ ವರ್ಗದ ಭಾಗವೊಂದಕ್ಕೆ ಗ್ರಾಮೀಣ ಕೃಷಿಯೇತರ ಮತ್ತು ನಗರ ಪ್ರದೇಶದ ಅನೌಪಚಾರಿಕ ವಲಯಗಳಲ್ಲಿನ ಅನೌಪಚಾರಿಕ ಉತ್ಪಾದಕರಿಗೆ ಹೊರಗುತ್ತಿಗೆ ಮತ್ತು ಉಪ-ಗುತ್ತಿಗೆಯ ಮೂಲಕ ಅವಕಾಶವನ್ನು ನೀಡಲಾಗಿದೆ. ಔಪಚಾರಿಕ ವಲಯದ ಉದ್ಯಮಗಳೊಂದಿಗಿನ ಉಪ-ಗುತ್ತಿಗೆ ಸಂಬಂಧಗಳಲ್ಲಿ ಅನೌಪಚಾರಿಕ ಉತ್ಪಾದಕರು ಹೆಚ್ಚುತ್ತಿರುವುದರ ಜೊತೆಗೆ, ಔಪಚಾರಿಕ ವಲಯದಲ್ಲಿ ಅನೌಪಚಾರಿಕ ಉದ್ಯೋಗಗಳ ಹೆಚ್ಚಳವನ್ನು ಒಟ್ಟಾಗಿ, ಬಂಡವಾಳಶಾಹಿ ಉತ್ಪಾದನೆಯ ಅನೌಪಚಾರಿಕೀಕರಣ ಎಂದು ಅನೇಕ ಬಾರಿ ಉಲ್ಲೇಖಿಸಿಲಾಗುತ್ತದೆ; ಇದು ಫೋರ್ಡ್‌ವಾದಿ ಬಂಡವಾಳ-ದುಡಿಮೆಯ ಸಂಬಂಧವನ್ನು ವಿಪರ್ಯಯಗೊಳಿಸಿದ್ದು, ಇದು ಜಾಗತೀಕರಣದ ಕುರಿತಾದ ಚರ್ಚೆಯ ಕೇಂದ್ರಸ್ಥ ಭಾಗವಾಗಿದೆ.

ಆದಾಗ್ಯೂ, ಬೆಳೆಯುತ್ತಿರುವ ಶ್ರಮಿಕ ವರ್ಗದ ಒಂದು ದೊಡ್ಡ ಭಾಗವನ್ನು ಮುಖ್ಯವಾಗಿ ಹಳ್ಳಿಗಾಡಿನ ಕೃಷಿಯೇತರ ಮತ್ತು ನಗರದ ಅನೌಪಚಾರಿಕ ಚಟುವಟಿಕೆಗಳಲ್ಲಿನ "ಸ್ವತಂತ್ರ" ಸ್ವಯಂಉದ್ಯೋಗಿ ಉತ್ಪಾದಕರು ಎಂಬ ನಿಟ್ಟಿನಲ್ಲಿ ತೊಡಗಿಸಿಕೊಳ್ಳಲಾಗಿದೆ. ನಮ್ಮ ತಿಳಿವಳಿಕೆಯ ಪ್ರಕಾರ ಇದು ಬಂಡವಾಳದ ಪರಿಧಿಯ ಹೊರಗೆ, ಉತ್ಪಾದನೆಯ ಕ್ಷೇತ್ರವೊಂದಕ್ಕೆ ಚೈತನ್ಯವನ್ನು ನೀಡುತ್ತದೆ. ವಸಾಹತುಶಾಹಿ ಕಾಲದಿಂದಲೂ ದಶಕಗಳ ವಸಾಹತೋತ್ತರ ಆರ್ಥಿಕ ಬೆಳವಣಿಗೆಯ ಮೂಲಕ ಸಾಂಪ್ರದಾಯಿಕವಾಗಿ ಹೆಚ್ಚುವರಿ ಶ್ರಮಿಕರನ್ನು ಒಳಗೊಳ್ಳುವ ಕ್ಷೇತ್ರವಾಗಿ ಕಾರ್ಯನಿರ್ವಹಿಸಿದ ಕೃಷಿಯು ಕಡೆಗೂ ತನ್ನ ಮಿತಿಗಳನ್ನು ತಲುಪಿದ್ದು, ಹೆಚ್ಚಿನ ಶ್ರಮಿಕರನ್ನು ನಿಧಾನ ಗತಿಯಲ್ಲಿ ತೊಡಗಿಸಿಕೊಳ್ಳುತ್ತಿದೆ. ಉತ್ಪಾದನೆ, ವ್ಯಾಪಾರ (ಸಗಟು ಮತ್ತು ಚಿಲ್ಲರೆ), ರಿಪೇರಿಯ ಕಾರ್ಯ ಚಟುವಟಿಕೆಗಳ ಕ್ಷೇತ್ರಗಳಲ್ಲಿ ಅನೌಪಚಾರಿಕ ಉದ್ಯೋಗವು ಹೆಚ್ಚಾಗಿ ಸೃಷ್ಟಿಯಾಗುತ್ತಿದೆ (ಕೋಷ್ಟಕವನ್ನು ನೋಡಿ).

ಉದ್ಯೋಗದ ರೀತಿ ಮತ್ತು ಕ್ಷೇತ್ರ (ಮಿಲಿಯನ್‌ಗಳಲ್ಲಿ)

| | 1999-2000 | | | 2004-2005 | | |
|---|---|---|---|---|---|---|
| | ಅನೌಪಚಾರಿಕ ಕೆಲಸಗಾರರು | ಔಪಚಾರಿಕ ಕೆಲಸಗಾರರು | ಒಟ್ಟು ಕೆಲಸಗಾರರು | ಅನೌಪಚಾರಿಕ ಕೆಲಸಗಾರರು | ಔಪಚಾರಿಕ ಕೆಲಸಗಾರರು | ಒಟ್ಟು ಕೆಲಸಗಾರರು |
| ಅನೌಪಚಾರಿಕ ಕ್ಷೇತ್ರ | 341.3 | 1.4 | 342.6 | 393.5 | 1.4 | 394.9 |
| ಔಪಚಾರಿಕ ಕ್ಷೇತ್ರ | 20.5 | 33.7 | 54.1 | 29.1 | 33.4 | 62.6 |
| ಒಟ್ಟು | 361.7 | 35 | 396.8 | 422.6 | 34.9 | 457.5 |

ಮೂಲ: ಅಸಂಘಟಿತ ಕ್ಷೇತ್ರದಲ್ಲಿನ ಉದ್ಯಮಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್) 2007: 3

ಭಾರತದ ಆರ್ಥಿಕತೆಯಲ್ಲಿನ ಒಟ್ಟಾರೆ ಉದ್ಯೋಗವು 1999-2000ರಲ್ಲಿನ 396.8 ಮಿಲಿಯನ್‌ಗಳಿಂದ 2004-05ರಲ್ಲಿ 457.5 ಮಿಲಿಯನ್‌ಗಳಿಗೆ ವೃದ್ಧಿಸಿತು. 1999-2000ರಿಂದ 2004-05ರ ನಡುವಿನ ಅವಧಿಯಲ್ಲಿ ಅನೌಪಚಾರಿಕ ಕ್ಷೇತ್ರವು 52.3 ಮಿಲಿಯನ್ ಹೆಚ್ಚುವರಿ ಶ್ರಮಿಕರನ್ನು

ಅಂದರೆ, ಒಟ್ಟಾರೆ ಸೃಷ್ಟಿಯಾದ ಉದ್ಯೋಗದ ಶೇಕಡಾ 86ರಷ್ಟು ಭಾಗವನ್ನು ತೊಡಗಿಸಿಕೊಂಡಿತು. ಸುರಕ್ಷಿತ ಔಪಚಾರಿಕ ಕ್ಷೇತ್ರದ ಉದ್ಯೋಗಗಳು 33.7 ಮಿಲಿಯನ್‌ಗಳಿಂದ 33.4 ಮಿಲಿಯನ್‌ಗಳಿಗೆ ಸ್ವಲ್ಪಮಟ್ಟಿನ ಕುಸಿತವನ್ನು ಕಂಡಿತು. ಯಾವುದೇ ಉದ್ಯೋಗ ಭದ್ರತೆ ಅಥವಾ ಸಾಮಾಜಿಕ ಭದ್ರತೆಯಿಲ್ಲದ ಶಾಶ್ವತ, ತಾತ್ಕಾಲಿಕ ಮತ್ತು ಗುತ್ತಿಗೆ ಕೆಲಸಗಾರರನ್ನು ಒಳಗೊಂಡ ಔಪಚಾರಿಕ ಕ್ಷೇತ್ರದಲ್ಲಿನ ಅನೌಪಚಾರಿಕ ಉದ್ಯೋಗಗಳು 1999-200 ರಿಂದ 2004-2005ರ ಅವಧಿಯಲ್ಲಿ 8.5 ಮಿಲಿಯನ್‌ಗಳಷ್ಟು ಹೆಚ್ಚಾಯಿತು. ಈ ರೀತಿಯಲ್ಲಿ ಅನೌಪಚಾರಿಕ ಕ್ಷೇತ್ರದಲ್ಲಿ ಉದ್ಯೋಗವು 52.3 ಮಿಲಿಯನ್‌ಗಳಷ್ಟು ಹೆಚ್ಚಾದರೆ, ಅನೌಪಚಾರಿಕ ಉದ್ಯೋಗವು 60.9 ಮಿಲಿಯನ್‌ಗಳಷ್ಟು ವೃದ್ದಿಸಿತು. ಅನೌಪಚಾರಿಕ ಉದ್ಯೋಗ ಮತ್ತು ಅನೌಪಚಾರಿಕ ಕ್ಷೇತ್ರದಲ್ಲಿನ ಉದ್ಯೋಗ ಇವುಗಳ ನಡುವಿನ ವ್ಯತ್ಯಾಸವು ಶ್ರಮಿಕ ವರ್ಗದ ಮೇಲಿನ ಜಾಗತೀಕರಣದ ಪರಿಣಾಮವನ್ನು ಪ್ರತಿಬಿಂಬಿಸುತ್ತದೆ. ಭಾರತದ ಆರ್ಥಿಕತೆಯಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಅನೌಪಚಾರಿಕ ಕ್ಷೇತ್ರವು ಸದಾ ಪ್ರಬಲವಾಗಿದ್ದರೂ ಜಾಗತೀಕರಣವು ಅನೌಪಚಾರಿಕ ಕ್ಷೇತ್ರದ ಉದ್ಯೋಗವನ್ನೇ ಹೋಲುವಂಥ ಪರಿಸ್ಥಿತಿಗಳ ಅಡಿಯಲ್ಲಿ (ತಾತ್ಕಾಲಿಕ ಮತ್ತು ಗುತ್ತಿಗೆ ಉದ್ಯೋಗ, ನಿಗದಿತ ಸೌಲಭ್ಯಗಳಿಲ್ಲದ ನಿಯತ ಉದ್ಯೋಗ) ಔಪಚಾರಿಕ ಕ್ಷೇತ್ರದಲ್ಲೂ ಉದ್ಯೋಗದ ಬೆಳವಣಿಗೆಗೆ ಎಡೆಮಾಡಿಕೊಟ್ಟಿದೆ. ಇದಲ್ಲದೆ ಕೃಷಿಯೇತರ ಅನೌಪಚಾರಿಕ ಕ್ಷೇತ್ರದಲ್ಲಿ ಮನೆಯಿಂದಲೇ ಕೆಲಸ ಮಾಡುವವರಿದ್ದು, ಅವರು ಉಪ-ಗುತ್ತಿಗೆ ಅಥವಾ ಹೊರಗುತ್ತಿಗೆ ಸಂಬಂಧಗಳ ಮೂಲಕ ದೇಶೀಯ ಅಥವಾ ಜಾಗತಿಕ ಮೌಲ್ಯ-ಸರಪಳಿಗಳಲ್ಲಿ (ಉದಾ: ಉಡುಪುಗಳು) ನೆಲೆಗೊಂಡಿರುತ್ತಾರೆ. ವಾಸ್ತವವಾಗಿ ಇವರು "ಮರೆಮಾಚಲ್ಪಟ್ಟ ಕೂಲಿ-ಕೆಲಸಗಾರರೇ" (ಎನ್‌ಸಿಇಯುಎಸ್-2007). ಅಂಕಿಅಂಶಗಳ ಪ್ರಕಾರ, ಅನೌಪಚಾರಿಕ "ಸ್ವಯಂ ಉದ್ಯೋಗಿ"ಗಳೆಂಬುದಾಗಿ ಹೆಸರಿಸಿರುವ ಮನೆಯಿಂದಲೇ ಕೆಲಸಮಾಡುವವರು (8.2 ಮಿಲಿಯನ್) 1999-2000ದ ಅವಧಿಯಲ್ಲಿ ಕೃಷಿಯೇತರ ಅನೌಪಚಾರಿಕ ಕಾರ್ಮಿಕ ವರ್ಗದ 7.4%ರಷ್ಟಿದ್ದು, ಅನೌಪಚಾರಿಕ ಉತ್ಪಾದನಾ ಕೆಲಸಗಾರರು 30%ರಷ್ಟಿದ್ದಾರೆ (ಎನ್‌ಸಿಇಯುಎಸ್ 2007:57). ದೊಡ್ಡ ಉದ್ಯಮಗಳಿಂದ ಸಣ್ಣ ಉದ್ಯಮಗಳಿಗೆ ಉಪ-ಗುತ್ತಿಗೆಯು ಹೆಚ್ಚುತ್ತಿದೆಯಲ್ಲದೆ, ಅದರ ಪರಿಣಾಮವಾಗಿ ಸಣ್ಣ ಉದ್ಯಮಗಳು ಉಪ-ಗುತ್ತಿಗೆ ನೀಡುವ, ಮನೆಯಿಂದಲೇ ಕೆಲಸ ಮಾಡುವವರೂ ಹೆಚ್ಚುತ್ತಿದ್ದಾರೆ. ಬಂಡವಾಳದ ಪರಿಧಿಯಲ್ಲಿ, ಅನೌಪಚಾರಿಕೀಕರಣ ಎಂದು ಹೇಳುವಾಗಲೆಲ್ಲಾ ನಾವು ಔಪಚಾರಿಕ ಕ್ಷೇತ್ರದಲ್ಲಿ ನಿಯತ ಮತ್ತು ಸುರಕ್ಷಿತ ಉದ್ಯೋಗಗಳ ಕ್ಷೀಣತೆ ಅಥವಾ ನಿಷ್ಕ್ರಿಯತೆಯೊಂದಿಗೆ, ಔಪಚಾರಿಕ ಕ್ಷೇತ್ರದಲ್ಲಿ ಅನೌಪಚಾರಿಕೀಕರಣಕ್ಕೆ ಒಳಗಾದ ಕೂಲಿ-ಕೆಲಸಗಾರರು ಹೆಚ್ಚುತ್ತಿರುವ ಬಗ್ಗೆ ಮತ್ತು ಅನೌಪಚಾರಿಕ ಕ್ಷೇತ್ರದೊಳಗಿನ ಮರೆಮಾಚಿದ ಕೂಲಿ-ಕೆಲಸಗಾರರ ಬಗ್ಗೆ ಹೇಳಿರುತ್ತೇವೆ.

ಇನ್ನೊಂದು ಕಡೆಯಲ್ಲಿ, ಮನೆಯಿಂದಲೇ ಕೆಲಸ ಮಾಡುವವರನ್ನು ಹೊರತುಪಡಿಸಿ, ಸ್ವಯಂ ಉದ್ಯೋಗಿ ಉತ್ಪಾದಕರು ಹೆಚ್ಚುತ್ತಿರುವುದು, ಭಾರತದ ಆರ್ಥಿಕತೆಯಲ್ಲಿ ಬಂಡವಾಳಶಾಹಿಯೇತರ ನೆಲೆಯ ವಿಸ್ತರಣವನ್ನು ರೂಪಿಸಿದೆ. 2004-05ರ ಅವಧಿಯಲ್ಲಿ ಸ್ವಯಂ ಉದ್ಯೋಗಿ ಕೆಲಸಗಾರರು ಒಟ್ಟಾರೆ ಕಾರ್ಮಿಕರ ಸಂಖ್ಯೆಯಲ್ಲಿ 56%ರಷ್ಟಿದ್ದು, – ಕೃಷಿ ಕೆಲಸಗಾರರಲ್ಲಿ 64% ಮತ್ತು ಕೃಷಿಯೇತರ ಕೆಲಸಗಾರರಲ್ಲಿ 46%ರಷ್ಟಿದ್ದರು (ಎನ್‌ಸಿಇಯುಎಸ್2007:49). ಕೃಷಿ ಸಂಬಂಧಿತ ದುಡಿಮೆಗಾರರಲ್ಲಿ ಈಗಲೂ ರೈತರು

(ಕೃಷಿಯಲ್ಲಿನ ಸ್ವಯಂ ಉದ್ಯೋಗಿಗಳು) [vii] ಅಧಿಕ ಸಂಖ್ಯೆಯಲ್ಲಿದ್ದಾರೆ; 1990ರ ದಶಕದಲ್ಲಿ ಸ್ಥಿರವಾಗಿ ಕ್ಷೀಣಿಸುತ್ತಿದ್ದ ಅವರ ಸಂಖ್ಯೆಯು, ಅಂದರೆ, ದುಡಿಮೆಗಾರರಲ್ಲಿನ ಅವರ ಭಾಗವು 1999-2000 ಮತ್ತು 2004-05ರ ಅವಧಿಯಲ್ಲಿ ವೃದ್ಧಿಸಿದ್ದು, ಅದೇ ಅವಧಿಯಲ್ಲಿ ಕೃಷಿಯಲ್ಲಿನ ಕೂಲಿ ಕೆಲಸಗಾರರ ಪ್ರಮಾಣವು ಕ್ಷೀಣಿಸಿತು[viii] (ಎನ್‌ಸಿಯುಎಸ್2007: 111).

ಕೃಷಿಯೇತರ ಅಸಂಘಟಿತ ವಲಯದಲ್ಲಿ ಎರಡು ರೀತಿಯ ಉದ್ಯಮಗಳಿವೆ – (ಅ) ಸ್ವಂತ ಖಾತೆಯ ಉದ್ಯಮಗಳು (ಓನ್ ಅಕೌಂಟ್ ಎಂಟರ್‌ಪ್ರೈಸಸ್ – ಓಎಇಎಸ್). ಇಲ್ಲಿ ಮಾಲೀಕ-ನಿರ್ವಾಹಕನು ಕುಟುಂಬದವರ ಶ್ರಮದ ಸಹಾಯದೊಂದಿಗೆ ಉತ್ಪಾದನೆಯನ್ನು ನಿರ್ವಹಿಸುತ್ತಾನೆ. (ಆ) ಮಾಲೀಕ ನಿರ್ವಾಹಕನು ಕುಟುಂಬದ ದುಡಿಮೆ ಮತ್ತು "ಬಾಡಿಗೆ ಕೂಲಿಯವರ" ಜೊತೆಗೆ ಉತ್ಪಾದನೆಯನ್ನು ನಿರ್ವಹಿಸುವ ಸಂಸ್ಥಾಪನೆಗಳು. 1999-2000ದಲ್ಲಿ ಓಎಇಎಸ್, ಒಟ್ಟಾರೆ ಅನೌಪಚಾರಿಕ ಉದ್ಯಮಗಳ 87%ರಷ್ಟಿದ್ದು, ಅನೌಪಚಾರಿಕ ಕೃಷಿಯೇತರ ಕೆಲಸಗಾರರಲ್ಲಿ ಇವರ ಪ್ರಮಾಣವು 73%ರಷ್ಟಿತ್ತು (ಎನ್‌ಸಿಇಯುಎಸ್ 2007: 51). 1999-2000ದ ಅವಧಿಯಲ್ಲಿ ಓಎಇಎಸ್‌ನ ಬಹುಪಾಲು ಉದ್ಯಮಗಳು ಉತ್ಪಾದನೆ (31.83%), ರಿಪೇರಿ ಮತ್ತು ವ್ಯಾಪಾರ (ಸಗಟು ಮತ್ತು ಚಿಲ್ಲರೆ) ಚಟುವಟಿಕೆಗಳಲ್ಲಿ (39.67%) ತೊಡಗಿದ್ದವು [(ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್ (ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ 2001)]. 1999-2000ದ ಅವಧಿಯಲ್ಲಿ ಕೇವಲ 11% ಭಾಗ ಓಎಇಎಸ್‌ಗಳು ಮಾತ್ರ ಬೃಹತ್ ಉದ್ಯಮಗಳ ಜೊತೆಯಲ್ಲಿ ಅಥವಾ ಗುತ್ತಿಗೆದಾರರ ಜೊತೆಯಲ್ಲಿ ಯಾವುದೇ ರೀತಿಯ ಗುತ್ತಿಗೆಯೊಂದಿಗೆ ಕೆಲಸ ಮಾಡುತ್ತಿದ್ದವು ಎಂಬುದು ಅನೌಪಚಾರಿಕ ಆರ್ಥಿಕತೆಯಲ್ಲಿ ಸಣ್ಣ ಉತ್ಪಾದನೆಯು ಸಾಪೇಕ್ಷವಾಗಿ "ಸ್ವತಂತ್ರ"ವಾಗಿತ್ತು ಎಂಬುದನ್ನು ಪ್ರತಿಬಿಂಬಿಸುತ್ತದೆ.

ಈ ರೀತಿಯಲ್ಲಿ, ಅನೌಪಚಾರಿಕ ಶ್ರಮಿಕ ವರ್ಗದ ಜೀವನೋಪಾಯದ ಪ್ರಮುಖ ಮೂಲವಾಗಿ ಸ್ವಂತ ಉದ್ಯೋಗದೆಡೆಗಿನ ಸುಸ್ಪಷ್ಟ ಪ್ರವೃತ್ತಿಯೊಂದಿಗೆ, ಭಾರತೀಯ ಆರ್ಥಿಕತೆಯ ಅನೌಪಚಾರಿಕೀಕರಣವು ವೃದ್ಧಿಸುತ್ತಿದೆ. ದುಡಿಯುವ ಜನರ ನಡುವಿನ ಈ ಬೆಳವಣಿಗೆಗಳು ಜಾಗತೀಕರಣದ ಅಡಿಯಲ್ಲಿ ಭಾರತೀಯ ಆರ್ಥಿಕತೆಯ ಬೆಳವಣಿಗೆಯ ಒಂದು ಮೂಲಭೂತ ಲಕ್ಷಣದತ್ತ ಬೊಟ್ಟುಮಾಡುತ್ತದೆ. ಆರ್ಥಿಕತೆಯ ಔಪಚಾರಿಕ ವಲಯದಲ್ಲಿ ಉತ್ಪಾದನೆಯ ಬೆಳವಣಿಗೆಯಿಂದ ಉದ್ಯೋಗಾವಕಾಶಗಳ ಬೆಳವಣಿಗೆಯ ಜೋಡಣೆಯು ಕಳಚಿದೆ. ಕಾರ್ಮಿಕ ಸಚಿವಾಲಯದ ಒಂದು ದಸ್ತಾವೇಜಿನಂತೆ, ಜಾಗತೀಕರಣದ ಅವಧಿಯ ಉದ್ದಕ್ಕೂ, "ನಿರುದ್ಯೋಗಿಗಳ ಪುನರ್ವಸತಿಯಲ್ಲಿ ಸ್ವಂತ ಉದ್ಯೋಗ ಮತ್ತು ತಾತ್ಕಾಲಿಕ ದುಡಿಮೆಯ ಮುಖ್ಯ ಪಾತ್ರವು ಮುಂದುವರೆಯಿತು."[ix]

## ಬಡತನ ಮತ್ತು ಅನೌಪಚಾರಿಕ ಶ್ರಮಿಕರ ನಗರೀಕರಣ

ಸ್ವಾತಂತ್ರ್ಯ ನಂತರದ ಅರ್ಧ ಶತಮಾನದಲ್ಲಿ ಒಟ್ಟಾರೆ ಕೃಷಿಯು ಭಾರತದ ಬಂಡವಾಳಶಾಹಿ ಕೈಗಾರಿಕೀಕರಣಕ್ಕೆ ಚಯಾನೊವ್‌ರವರ ಬಾಹ್ಯದ ಪಾತ್ರವನ್ನು ನಿರ್ವಹಿಸಿತು. ಭಾರತೀಯ ವ್ಯವಸಾಯದಲ್ಲಿ ಪ್ರಾಬಲ್ಯ ಹೊಂದಿರುವುದು ರೈತರೇ ಹೊರತು ಕೂಲಿ ಕೆಲಸಗಾರರಲ್ಲ ಎಂಬ ವಾಸ್ತವಾಂಶವು ಇದಕ್ಕೆ ಸಾಕ್ಷ್ಯವನ್ನು ಒದಗಿಸುತ್ತದೆ. ಲಾಭದಾಯಕವಲ್ಲದ ಜಮೀನನ್ನು ಹೊಂದಿರುವ ಸಣ್ಣ ಹಾಗೂ ಅಂಚಿನಲ್ಲಿರುವ ರೈತರು ರೈತಾಪಿ ವರ್ಗದಲ್ಲಿ ಹೆಚ್ಚಿನ

ಸಂಖ್ಯೆಯಲ್ಲಿದ್ದು, ದೇಶದ ಸಮಸ್ತ ದುಡಿಯುವ ವರ್ಗದಲ್ಲಿ, ಒಟ್ಟಾರೆ ಕೃಷಿಯ ಪ್ರಮಾಣವು ಅಸಮಾನವಾಗಿದೆ. ಇತ್ತೀಚೆಗೆ, ಹೆಚ್ಚುವರಿ ಕೆಲಸಗಾರರ ಈ ಪಾರಂಪರಿಕ "ಇಳಿಕೆ"ಯು ಅತ್ಯಧಿಕವಾಗಿರುವುದಕ್ಕೆ ಸ್ಪಷ್ಟ ಕುರುಹುಗಳಿವೆ. ಭಾರತದ ಆರ್ಥಿಕತೆಯಲ್ಲಿ ಗ್ರಾಮೀಣ ಕೃಷಿಯೇತರ ವಲಯದ ವಿಸ್ತರಣೆಯು ಅತ್ಯಂತ ಕಷ್ಟಕರವಾದುದು. ಜಾಗತೀಕರಣದ ಯುಗದಲ್ಲಿ ಕೃಷಿ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳ ಬೆಳವಣಿಗೆಯು ತೀರ ಅಲ್ಪ ಪ್ರಮಾಣದಲ್ಲಿರುವುದು ಕಂಡುಬಂದಿದೆ. 1983ರಿಂದ 1994ರ ಅವಧಿಯಲ್ಲಿ ಒಟ್ಟಾರೆ ದುಡಿಯುವ ಜನರ ಸಂಖ್ಯೆಯು 2.1%ರಷ್ಟು ಮತ್ತು 1994ರಿಂದ 2005ರವರೆಗಿನ ಅವಧಿಯಲ್ಲಿ 1.9%ರಷ್ಟು ವೃದ್ಧಿಸಿದ್ದು ಅದೇ ಅವಧಿಯಲ್ಲಿ ಕೃಷಿಯಲ್ಲಿನ ಕೆಲಸಗಾರರ ಸಂಖ್ಯೆಯ ಸದೃಶ ವೃದ್ಧಿಯು 1.4% ಮತ್ತು 0.8%ರಷ್ಟಿದೆ (ಎನ್‌ಸಿಇಯುಎಸ್ 2007: 116).

ಕೃಷಿ ಕೆಲಸಗಾರರಲ್ಲಿ ರೈತರ ಭಾಗವು ಹೆಚ್ಚುತ್ತಿರುವುದು ಕೃಷಿ ತೊಡಗಣೆ(involution)ಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ದುಡಿಯುವವರಲ್ಲಿನ ವೃದ್ಧಿಶೀಲ ಭಾಗವನ್ನು ಜಮೀನಿನ ವಿಭಜನೆ ಮತ್ತು ಕೆಲಸದ ಹಂಚಿಕೆಯ ಆಧಾರದಲ್ಲಿ ಒಳಗೊಳ್ಳಲಾಗುತ್ತಿದೆ (ಎನ್‌ಸಿಇಯುಎಸ್ 2007). ಅತ್ಯಂತ ಕಡಿಮೆ ಜಮೀನಿರುವ ಹಳ್ಳಿಗಾಡಿನ ಕುಟುಂಬಗಳ ಪ್ರಮಾಣವು 1999-2000ದ ಅವಧಿಯಲ್ಲಿ 59%ರಿಂದ 2004-05ರ ಅವಧಿಯಲ್ಲಿ 62%ಕ್ಕೆ ಹೆಚ್ಚಿತು ಮತ್ತು ಅದೇ ಅವಧಿಯಲ್ಲಿ ಸಣ್ಣ, ಮಧ್ಯಮ ಮತ್ತು ದೊಡ್ಡ ಭೂ ಹಿಡುವಳಿಗಳಿರುವ ಕುಟುಂಬಗಳು ಕೊಂಚ ಮಟ್ಟಿಗೆ ಇಳಿಕೆಯನ್ನು ಕಂಡವು. ತತ್ಫಲವಾಗಿ ಸರಾಸರಿ ಭೂ ಹಿಡುವಳಿಯ ಪ್ರಮಾಣವು 1999-2000ದಲ್ಲಿ 1.00 ಹೆಕ್ಟೇರ್‌ನಿಂದ 2004-05ರ ಅವಧಿಯಲ್ಲಿ 0.8 ಹೆಕ್ಟೇರ್‌ಗೆ ಇಳಿಯಿತು (ಎನ್‌ಸಿಇಯುಎಸ್ 2007: 112).[x] ಈ ಹಿಡುವಳಿಗಳ ಹಂಚಿಕೆಯಲ್ಲಿನ ಬದಲಾವಣೆಯ ಸ್ವರೂಪವು ಅಂದರೆ ಇತರೆ ಎಲ್ಲಾ ಪ್ರಮಾಣದ ಭೂಹಿಡುವಳಿಗಳಿಗೆ ಹೋಲಿಸಿದರೆ ಅಂಚಿನಲ್ಲಿರುವ ಹಿಡುವಳಿಗಳ ಪ್ರಮಾಣದಲ್ಲಿನ ವೃದ್ಧಿಯು 1950ರ ದಶಕದಿಂದಲೂ ನಿರಂತರ ಪ್ರಕ್ರಿಯೆಯಾಗಿದೆ. 2002-03ರಲ್ಲಿ ಅಂಚಿನಲ್ಲಿರುವ ರೈತರು ಮತ್ತು ಸಣ್ಣ ರೈತರು ಒಟ್ಟಾರೆ ರೈತರಲ್ಲಿ 83%ರಷ್ಟಿದ್ದು, 43%ರಷ್ಟು ಜಮೀನನ್ನು ಸಾಗುವಳಿ ಮಾಡಿದ್ದರು (ಎನ್‌ಸಿಇಯುಎಸ್ 2007: 113). ಹೆಚ್ಚುವರಿ ದುಡಿಮೆಗಾರರನ್ನು ಭೂಮಿಯ ವಿಭಜನೆ ಮತ್ತು ಸರಾಸರಿ ಉತ್ಪನ್ನದ ಹಂಚಿಕೆಯ ಮೂಲಕ ಕೃಷಿಯು ಒಳಗೊಳ್ಳುವ ಪಾರಂಪರಿಕ ಕಾರ್ಯರೀತಿಗೆ ಈ ಪ್ರಕ್ರಿಯೆಯು ಆಧಾರವಾಗಿದೆ ಹಾಗೂ ಇದು, ಮರೆಮಾಚಿದ ನಿರುದ್ಯೋಗಕ್ಕೆ ಪಠ್ಯಪುಸ್ತಕದ ನಿದರ್ಶನವಾಗಿದೆ. ಹಿಡುವಳಿಯ ಪ್ರಮಾಣಕ್ಕೆ ಅನುಸಾರವಾಗಿ ಸರಾಸರಿ ಮಾಸಿಕ ಆದಾಯ ಮತ್ತು ಸರಾಸರಿ ಮಾಸಿಕ ವೆಚ್ಚವನ್ನು ಹೋಲಿಸಿ ನೋಡಿದರೆ ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಸಂದರ್ಭದಲ್ಲಿ ತಲಾವಾರು ಮಾಸಿಕ ಆದಾಯದ ಸ್ತರಗಳು ಅವರ ಮಾಸಿಕ ವೆಚ್ಚದ ಸ್ತರಗಳಿಗಿಂತ ಕಡಿಮೆಯಿದ್ದು, ಈ ಕುಟುಂಬಗಳು ತಮ್ಮ ಬಳಕೆಯ ಅಗತ್ಯಗಳಿಗಾಗಿ ಸಾಲ ಮಾಡಬೇಕಾಗುತ್ತದೆ (ಎನ್‌ಸಿಇಯುಎಸ್ 2007: 120).[xi]

ಕೃಷಿಯಿಂದ ಹೊರಗೆ ವಲಸೆ ಹೋಗುತ್ತಿರುವ ಜನರೊಂದಿಗಿನ ಗ್ರಾಮೀಣ ಕೆಲಸಗಾರರ ವೃತ್ತಿ ಸಂಬಂಧಿತ ವಿಭಿನ್ನತೆಯ ಸ್ಪಷ್ಟ ಕುರುಹುಗಳೊಂದಿಗೆ, ಭಾರತದ ಕೃಷಿಕ್ಷೇತ್ರದಲ್ಲಿನ ಗಂಭೀರ ಪರಿಸ್ಥಿತಿಯು ಹಳ್ಳಿಗಾಡಿನ ಕೆಲಸಗಾರರ ಸಂಖ್ಯೆಯಲ್ಲಿನ ಕೃಷಿ ಕೂಲಿಗಾರರ ಭಾಗದ ಸತತ ಇಳಿಕೆಯಲ್ಲಿ ಪ್ರತಿಬಿಂಬಿತವಾಗಿದೆ (1983ರಲ್ಲಿ 81.4%ರಿಂದ 2004-05ರಲ್ಲಿ 72.7%ರಷ್ಟು). ಇದರ ಗಣನೀಯ ಭಾಗವು ಗ್ರಾಮೀಣ ಕೃಷಿಯೇತರ ವಲಯದಲ್ಲಿ, ಬಹುತೇಕವಾಗಿ ಅನೌಪಚಾರಿಕ

ಸ್ವಯಂಉದ್ಯೋಗದ ನಿಟ್ಟಿನಲ್ಲಿ ಅಂದರೆ, ಸಿದ್ಧ ಉಡುಪುಗಳ ತಯಾರಿಕೆ, ಚಿಲ್ಲರೆ ವ್ಯಾಪಾರ, ಭೂ ಸಾರಿಗೆ, ಎಸ್‌ಟಿಡಿ/ಐಎಸ್‌ಡಿ ಬೂತ್‌ಗಳು, ಮೋಟಾರು ವಾಹನಗಳ ನಿರ್ವಹಣೆ ಮತ್ತು ದುರಸ್ತಿ ಹಾಗೂ, ಹೋಟೆಲ್‌ಗಳಲ್ಲಿ ಮಗ್ನವಾಗಿದ್ದಿತು.

ಹಳ್ಳಿ-ನಗರದ ವಲಸೆಯು ಸಹಜವಾಗಿ, ಕೃಷಿಯ ಶೂನ್ಯೀಕರಣಕ್ಕೆ ಇನ್ನೊಂದು ಮಹತ್ವದ ಪ್ರತಿಕ್ರಿಯೆನಿಸಿದೆ. ಚರಿತ್ರೆಯಲ್ಲಿ ಮೊದಲಬಾರಿಗೆ ನಗರದ ಜನಸಂಖ್ಯೆಯು ಹಳ್ಳಿಯ ಜನಸಂಖ್ಯೆಯನ್ನು ಮೀರಿಸಿದೆ. “ದಿ ಚಾಲೆಂಜ್ ಆಫ್ ಸ್ಲಂಸ್” ಎಂಬ 2003ರ ವಿಶ್ವಸಂಸ್ಥೆಯ ಜನವಸತಿ ವರದಿಯ ಪ್ರಕಾರ, ಭವಿಷ್ಯದ ಎಲ್ಲಾ ಜನಸಂಖ್ಯಾ ಹೆಚ್ಚಳವನ್ನು ನಗರಗಳೇ ಒಳಗೊಳ್ಳುತ್ತವೆ.[xii]

ಗ್ರಾಮೀಣ ಪ್ರದೇಶಗಳು ತಮ್ಮ “ಸಂಗ್ರಹ ಸಾಮರ್ಥ್ಯ”ವನ್ನು ಕಳೆದುಕೊಳ್ಳುತ್ತಿದ್ದಂತೆ ಕೊಳೆಗೇರಿಗಳು ಅವುಗಳ ಸ್ಥಾನವನ್ನು ತುಂಬುತ್ತವೆ ಮತ್ತುಸ್ವಯಂ-ಶೋಷಣೆಯ ಧೀರೋದಾತ್ತ ಗಮನಾರ್ಹ ಕೆಲಸಗಳು ಮತ್ತು ಈಗಾಗಲೇ ನಿಬಿಡವಾಗಿ ತುಂಬಿಹೋಗಿರುವ ಬದುಕುಳಿಯುವ ನೆಲೆಗಳಲ್ಲಿ, ಇನ್ನಷ್ಟು ಸ್ಪರ್ಧಾತ್ಮಕ ಪುನರ್ವಿಭಜನೆಗಳಿಂದ ಮಾತ್ರವೇ ಜೀವನಾಧಾರದ ಸಮಗತಿಯ ಚಲನೆಯನ್ನು ಉಳಿಸಿಕೊಳ್ಳಬಲ್ಲ ನಗರದ “ತೊಡಗಿಸಿಕೊಳ್ಳುವಿಕೆ”ಯು ಹೆಚ್ಚುವರಿ ಕೆಲಸಗಾರರನ್ನು ತನ್ನಲ್ಲಿ ಮಗ್ನರನ್ನಾಗಿಸುತ್ತ, ಹಳ್ಳಿಗಳ ತೊಡಗಿಸಿಕೊಳ್ಳುವಿಕೆಯ ಸ್ಥಾನವನ್ನು ತುಂಬುತ್ತದೆ (ಡೇವಿಸ್ 2004: 27).

ಭಾರತದಲ್ಲಿನ ಬಹುತೇಕ ಓಎಇಎಸ್‌ಗಳು ಸ್ಥಿರಾಸ್ತಿಗಳಲ್ಲಿ ಬಹಳ ಕಡಿಮೆ ಸರಾಸರಿ ಹೂಡಿಕೆ ಮೌಲ್ಯದೊಂದಿಗೆ ಕೆಲಸ ಮಾಡುತ್ತವೆ (1999-2000ದಲ್ಲಿ 70,000ರೂ.ಗಳು) [xiii] ಮತ್ತು ಸಣ್ಣ ಉತ್ಪಾದಕರು ಅದರಲ್ಲಿನ ಬಹುತೇಕ ಭಾಗದ ಸ್ವಾಮ್ಯವನ್ನು ಹೊಂದಿರುತ್ತಾರೆ. 1999-2000ದಲ್ಲಿ[xiv] ಸರಾಸರಿ 2175 ರೂ.ಗಳ ಒಟ್ಟು ಮಾಸಿಕ ಮೌಲ್ಯವನ್ನು (ಎನ್‌ಸಿಇಯುಎಸ್ 2007: 52-53) ಪ್ರತಿಯೊಂದು ನಗರಪ್ರದೇಶದ ಅನೌಪಚಾರಿಕ ಓಎಇಎಸ್‌ನಲ್ಲಿ ಸೇರಿಸಲಾಗಿದೆ. ಯಾವುದೇ ಬಾಡಿಗೆ ಕೂಲಿಗಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳದೆ, ಕನಿಷ್ಟ ಬಂಡವಾಳವನ್ನು ಹೂಡುವ ಸಣ್ಣ ಉತ್ಪಾದಕನ ಆದಾಯವು ಹೆಚ್ಚು ಕಡಿಮೆ ಪ್ರತಿಯೊಬ್ಬ ಕಾರ್ಮಿಕನಿಗೆ ಸೇರಿಸುವ ಒಟ್ಟಾರೆ ಮೌಲ್ಯಕ್ಕೆ ಸಮನಾಗಿರುತ್ತದೆ. ಆದ್ದರಿಂದ, ನಗರಪ್ರದೇಶದ ಸಣ್ಣ ಉತ್ಪಾದನಾ ಘಟಕಗಳು ಜೀವನಾಧಾರದ ಸ್ತರಗಳಲ್ಲಿ ಕೆಲಸ ಮಾಡುತ್ತವೆ. ಅಂದರೆ, ಅಂದಾಜು ಮಾಡಲ್ಪಟ್ಟಿರುವ ನಗರೀಕರಣದ ಸ್ತರಗಳೊಂದಿಗೆ, ಸದ್ಯದಲ್ಲೇ, ನಗರ ಪ್ರದೇಶದ ಅನೌಪಚಾರಿಕ ಆರ್ಥಿಕತೆಯು ಬಡತನದ ಬೃಹತ್ ನೆಲೆಯ ನಿಟ್ಟಿನಲ್ಲಿ, ಗ್ರಾಮೀಣ ಆರ್ಥಿಕತೆಯ ಜಾಗದಲ್ಲಿ ಪ್ರತಿಸ್ಥಾಪಿತಗೊಳ್ಳಲಿದೆ.

ಕೃಷಿಯೇತರ ಅನೌಪಚಾರಿಕ ಚಟುವಟಿಕೆಯ ಗಣನೀಯ ಭಾಗವನ್ನು ಕುಟುಂಬದ ಶ್ರಮವನ್ನು ಉಪಯೋಗಿಸಿಕೊಂಡು ಮನೆಯ ಒಳಗಡೆಯೇ ಕೈಗೊಳ್ಳಲಾಗುತ್ತದೆ. ಸ್ವಯಂ-ಉದ್ಯೋಗದ ಉತ್ಪಾದನಾ ಘಟಕಗಳು ‘ಸಹಾಯಕ’ರಾಗಿ ತೊಡಗಿಸಿಕೊಂಡ ಕುಟುಂಬದ ಸದಸ್ಯರ ಕೊಡುಗೆಯನ್ನು ಒಳಗೊಂಡಿರುತ್ತವೆ. ವಾಸಸ್ಥಳವನ್ನೇ ಉತ್ಪಾದನೆಯ ಸ್ಥಳವೆಂಬಂತೆ ಬಳಸಲಾಗುತ್ತದೆ. ಕುಟುಂಬದ ಸದಸ್ಯರ ಬೈಸಿಕಲ್‌ನಂತಹ ಸ್ವಂತ ವಸ್ತುಗಳು ಉದ್ಯಮದ ಆಸ್ತಿಯಾಗಿರುತ್ತವೆ. ಕುಟುಂಬಗಳ ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳು ಉದ್ಯಮದ ಸ್ಥಿರ

ಹೂಡಿಕೆಗಳಾಗಿರುತ್ತವೆ ಮತ್ತು ಕುಟುಂಬದ ವೆಚ್ಚ ಹಾಗೂ ಉತ್ಪಾದನಾ ವೆಚ್ಚಗಳು ಮೇಲು ವ್ಯಾಪನ(overlap)ಗೊಂಡಿರುತ್ತವೆ. ಹೀಗಾಗಿ ತತ್‌ಕ್ಷಣದ ಬಳಕೆಗೆ ಉಪಯೋಗ ಮೌಲ್ಯಗಳ ಕುಟುಂಬದ ಉತ್ಪಾದನೆಯನ್ನು ಮತ್ತು ಕುಟುಂಬದ ವ್ಯಾಪ್ತಿಯಲ್ಲಿನ ಸರಕು ಉತ್ಪಾದನೆಯನ್ನು ಬೇರ್ಪಡಿಸುವುದು ಕಷ್ಟ. ಕುಟುಂಬಕ್ಕೆ ಸೇರಿದ ಜಾಗದಲ್ಲಿ ಸರಕುಗಳ ಉತ್ಪಾದನೆಯು, ಕುಟುಂಬದ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಮೂಲಕ ಅನೌಪಚಾರಿಕ ಉತ್ಪಾದನಾ ಘಟಕಗಳಿಗೆ ತಮ್ಮ ದುರ್ಲಭ ಸಂಪನ್ಮೂಲಗಳನ್ನು ತುಂಬಿಕೊಳ್ಳುವ ನಿಟ್ಟಿನಲ್ಲಿ, ಅವಕಾಶ ನೀಡುತ್ತದೆ. ಕುಟುಂಬದ ಆವರಣಗಳ ವ್ಯಾಪ್ತಿಯಲ್ಲಿನ ಉತ್ಪಾದನಾ ಸ್ಥಳವು, ಇಂತಹ ಕಡಿಮೆ ಮಟ್ಟದ ನಿಶ್ಚಿತ ವ್ಯಾಪಾರ ಹೂಡಿಕೆಯೊಂದಿಗಿನ ಅನೌಪಚಾರಿಕ ಉತ್ಪಾದನಾ ಘಟಕಗಳು ಹೇಗೆ ತಮ್ಮ ಅಸ್ತಿತ್ವವನ್ನು ನಿರ್ವಹಿಸುತ್ತವೆ ಎಂಬುದನ್ನು ವಿವರಿಸುತ್ತದೆ. ಇದು ವಿಶೇಷವಾಗಿ ತಯಾರಿಕಾ ಉದ್ಯಮಗಳ ಮಟ್ಟಿಗೆ ಸತ್ಯವಾದದ್ದು. 1999-2000ದಲ್ಲಿ, ತಯಾರಿಕಾ ಓಎಇಎಸ್‌ಗಳಲ್ಲಿ 76%ರಷ್ಟು ಗ್ರಾಮೀಣ ಘಟಕಗಳು ಮತ್ತು 63% ನಗರ ಘಟಕಗಳು ಕುಟುಂಬಗಳ ಆವರಣದ ವ್ಯಾಪ್ತಿಯಲ್ಲಿ ಸ್ಥಾಪಿತಗೊಂಡಿದ್ದವು (ಎನ್‌ಸಿಇಯುಎಸ್ 2007: 265).

ಮನೆ ಮತ್ತು ಕಾರ್ಯಾಗಾರಗಳು ಒಮ್ಮುಖವಾಗುತ್ತಿದ್ದಂತೆ ಸರಕುಗಳ ಉತ್ಪಾದನೆಯು ಚೇತನದ ಪುನರ್‌ಸೃಜನೆಯೊಂದಿಗೆ ಏಕಕಾಲಿಕಗೊಳ್ಳತೊಡಗುತ್ತದೆ. ಹೀಗೆ, ಕುಟುಂಬದ ವ್ಯಾಪ್ತಿಯಲ್ಲಿನ ಚೇತನದ ಪ್ರಕ್ರಿಯೆ ಮತ್ತು ಶ್ರಮದ ಪ್ರಕ್ರಿಯೆಗಳನ್ನು ಬೇರ್ಪಡಿಸಲಾಗದಂತಾಗುವುದು ಅನೌಪಚಾರಿಕ ಆರ್ಥಿಕತೆಯ ಹೊರಹೊಮ್ಮುತ್ತಿರುವ ಲಕ್ಷಣವಾಗಿದೆ. ಕಾರ್ಮಿಕನು ಕಾರ್ಖಾನೆಯ ದ್ವಾರಗಳ ವ್ಯಾಪ್ತಿಯಲ್ಲಿ ಎಂಟು ಘಂಟೆಗಳ ಕಾಲ ದುಡಿದು, ನಂತರ ಆಕೆ/ಆತ ಕುಟುಂಬದ ಪರಿಧಿಯಲ್ಲಿ ಚೇತನವನ್ನು ಪುನರ್‌ಸೃಜಿಸುವ 20ನೆಯ ಶತಮಾನದಲ್ಲಿನ ಶ್ರಮವನ್ನು ಕುರಿತ ಸರ್ವೇಸಾಮಾನ್ಯ ಕಲ್ಪನೆಯನ್ನು, ಇದು ತೀವ್ರವಾಗಿ ಹಿಮ್ಮುಖಗೊಳಿಸಿದೆ. ಮನೆ ಮತ್ತು ಕಾರ್ಯಾಗಾರದ ನಡುವಿನ ವ್ಯತ್ಯಾಸದ ಅಸ್ಪಷ್ಟತೆಯು ಶ್ರಮವನ್ನು ಕುರಿತ ಚಳುವಳಿಗಳ ಮನೆ ಆಧಾರಿತ ಉತ್ಪಾದನೆಯು ಮುನ್ನೆಲೆಗೆ ತರುವ ಹೊಸ ಪರಿಸ್ಥಿತಿಗಳಿಗೆ ಮತ್ತು ಅಂತಹ ಪರಿಸ್ಥಿತಿಗಳಿಂದ ರೂಪುಗೊಳ್ಳುವ, ಕಾರ್ಯರೂಪಕ್ಕೆ ಬರುವ ಸಾಧ್ಯತೆಯುಳ್ಳ ಹೊಸ ವ್ಯಕ್ತಿನಿಷ್ಠತೆಗೆ ಮುಖಾಮುಖಿಯಾಗಬೇಕಾಗುತ್ತದೆ.

ನಗರದ ಕೊಳಚೆ ಪ್ರದೇಶಗಳು ನಗರ ಪ್ರದೇಶದ ಅನೌಪಚಾರಿಕ ಜನತೆಯ ವಾಸಭೂಮಿಯ ಕ್ಷೇತ್ರದ ಉದಾಹರಣಾರೂಪದ ಪರಿಣಾಮಗಳೆನಿಸಿವೆ. ಕೊಳಚೆ ಪ್ರದೇಶಗಳು ಬಡವರ ಆವಾಸಸ್ಥಾನಕ್ಕಿಂತಲೂ ಹೆಚ್ಚು. ಪ್ರತಿಯೊಂದು ಕೊಳಚೆ ಪ್ರದೇಶವು ವಸ್ತುತಃ, ಸ್ವತಃ ಒಂದು ಉತ್ಪಾದನಾ ತಾಣವೇ ಆಗಿರುತ್ತದೆ. 2001ರಲ್ಲಿ ಸುಮಾರು ನೂರು ಕೋಟಿ ಯಥೇಚ್ಛ ಜನಸಂಖ್ಯೆಯೊಂದಿಗೆ, (ವಿಶ್ವಸಂಸ್ಥೆಯ ಆವಾಸಸ್ಥಾನ ವರದಿ 2003: 246) ಜಗತ್ತಿನಾದ್ಯಂತ ಕೊಳಚೆ ಪ್ರದೇಶಗಳು ಬಡಬಗ್ಗರ ಮ್ಯಾಂಚೆಸ್ಟರ್ ಅಥವಾ ಚಿಕಾಗೊ ನಗರಗಳಾಗಿ ಹೊರಹೊಮ್ಮುತ್ತಿವೆ. ಇಡೀ "ಉಪನಗರ" ಮಟ್ಟದಲ್ಲಿ ಮನೆ ಮತ್ತು ಕಾರ್ಯಾಗಾರಗಳು ಸಂಮಿಳನಗೊಳ್ಳುತ್ತಿದ್ದು, ಮಹಾನಗರಗಳ ಬೃಹತ್ ಕೊಳಚೆ ಪ್ರದೇಶಗಳು ಈಗಾಗಲೇ ಈ ರೀತಿಯಲ್ಲಿವೆ. ಮೂರನೆಯ ಜಗತ್ತಿನ ಮಹಾನಗರಗಳ ತಡೆರಹಿತ ಉದ್ಬುದ್ಧ ಹರಡುವಿಕೆಗೆ ಕೊಳೆಗೇರಿಗಳ ಸ್ಫೋಟಕ ಬೆಳವಣಿಗೆಯು ಉತ್ತೇಜನವನ್ನು ನೀಡುತ್ತಿದೆ. ಸರಕು ಉತ್ಪಾದನೆಯ ತಾಣವೂ ಆಗಿದ್ದು, ಚೇತನದ ಪುನರ್‌ಸೃಜನೆಯ ಸ್ಥಳವೂ ಆಗಬಲ್ಲ, ಕೊಳೆಗೇರಿಗಳಲ್ಲಿನ ಅನೌಪಚಾರಿಕ ಉತ್ಪಾದಕರಿಗೆ

ಅಗತ್ಯವಾದ, ತತ್‌ಸ್ಥಾನೀಯ ಸ್ಥಳಕ್ಕೆ ಇರುವ ಬೇಡಿಕೆಯನ್ನು ಕೊಳೆಗೇರಿಗಳ ವಿಸ್ತೃತ ಹರಡುವಿಕೆಯು ಪ್ರತಿಫಲಿಸುತ್ತದೆ.

ಮುಂಬೈನ ಧಾರಾವಿ ಕೊಳಚೆ ಪ್ರದೇಶವು 550 ಎಕರೆ ಪ್ರದೇಶದಲ್ಲಿ ಹರಡಿದ್ದು, ಜನಸಂಖ್ಯೆಯು 7 ಲಕ್ಷದಿಂದ ಹನ್ನೆರಡು ಲಕ್ಷದ ನಡುವೆಯಿದೆ(ಚಟರ್ಜಿ 2005). ಧಾರಾವಿಯ ಬಗ್ಗೆ ಯಾವುದೇ ಸಮಗ್ರ ಸಮೀಕ್ಷೆ ಇಲ್ಲ. ಆದರೆ ಅಲ್ಲಿನ ವಾರ್ಷಿಕ ವಹಿವಾಟು $700ರಿಂದ $1 ಬಿಲಿಯನ್‌ನಡುವೆಯಿರಬಹುದೆಂದು ಅಂದಾಜಿಸಲಾಗಿದೆ. ಜವಳಿಗಳು, ಕುಂಬಾರಿಕೆ, ಒಡವೆಗಳು, ಚರ್ಮ ಮತ್ತು ಆಹಾರ ಸಾಮಗ್ರಿಗಳು ಮತ್ತಿತರ ಸರಕುಗಳನ್ನು ಉತ್ಪಾದಿಸುವ ಕನಿಷ್ಠ 5 ಸಾವಿರ ಕೈಗಾರಿಕಾ ಉದ್ಯಮಗಳು ಇಕ್ಕಟ್ಟಾದ ಮನೆಗಳ ನಡುವೆ ಇವೆಯೆಂದು ಅಂದಾಜಿಸಲಾಗಿದೆ (ಆಪ್ಟೆ 2008). ಕಡೆಯ ಪಕ್ಷ 2 ಲಕ್ಷ ಜನರು ತ್ಯಾಜ್ಯ ಸಾಮಾನುಗಳ ಮರುಬಳಕೆ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ (ರಾಮಚಂದ್ರನ್ 2008).

2004ರಲ್ಲಿ ಮಹಾರಾಷ್ಟ್ರ ಸರ್ಕಾರವು ಮಹತ್ವಾಕಾಂಕ್ಷೆಯ 3 ಬಿಲಿಯನ್ ಡಾಲರ್ ಧಾರಾವಿ ಪುನರಭಿವೃದ್ಧಿ ಯೋಜನೆಯನ್ನು ಘೋಷಿಸಿದಾಗ ಕೂಡಲೇ ಧಾರಾವಿಯ ಜನರು ಅದನ್ನು ಪ್ರತಿರೋಧಿಸಿದರು. ಯೋಜನೆಯ ಪ್ರಕಾರ ಧಾರಾವಿಯ ಜನರಿಗೆ 225 ಚದರ ಅಡಿ ವಸತಿಯನ್ನು ಬಹುಮಹಡಿ ಕಟ್ಟಡಗಳಲ್ಲಿ ಉಚಿತವಾಗಿ ಕೊಡುವುದಿತ್ತು (ಮೆನನ್ 2008). ಅಂತಹ ಸಣ್ಣ ವಸತಿಯ ಜಾಗಗಳಲ್ಲಿ ಉತ್ಪಾದನಾ ಘಟಕಗಳಿಗೆ ಸ್ಥಳ ನೀಡಲು ಸಾಧ್ಯವಾಗುವುದಿಲ್ಲ ಮತ್ತು ಅಗಲವಾಗಿ ಹರಡಿಕೊಂಡ ಪ್ರದೇಶದ ಬದಲು ಉದ್ದುದ್ದ ನಿಂತ ಕಟ್ಟಡದಲ್ಲಿ, ಅನೌಪಚಾರಿಕ ಮನೆ-ಆಧಾರಿತ ಆರ್ಥಿಕ ಚಟುವಟಿಕೆಗಳಿಗೆ ಅಗತ್ಯವಿರುವ ಸ್ಥಳದ ತತ್‌ಸ್ಥಾನೀಯತೆಯನ್ನು ಅದು ನಿರ್ನಾಮ ಮಾಡುತ್ತದೆ. ಪುನರಭಿವೃದ್ಧಿ ಯೋಜನೆಯಲ್ಲಿರುವ ಸಮಸ್ಯೆಯೆಂದರೆ ಅದು ಧಾರಾವಿಯ "ನಿವಾಸಿಗಳ"ನ್ನು ಪರಿಗಣಿಸುತ್ತದೆಯೇ ಹೊರತು, "ಉತ್ಪಾದಕರ"ನ್ನಲ್ಲ.[xv]

ಧಾರಾವಿಯ ಉದ್ಯಮದ ಇಡೀ ಪ್ರದೇಶವು ಅಪಾಯದಲ್ಲಿದೆ. ಏಕೆಂದರೆ, ಬಹುತೇಕ ಉದ್ಯಮಗಳಿಗೆ ಪರವಾನಗಿಗಳಿಲ್ಲ ಮತ್ತು ಅದರಿಂದಾಗಿ ಅವುಗಳಿಗೆ ಪುನರಭಿವೃದ್ಧಿಯಾದ ಧಾರಾವಿಯಲ್ಲಿ ಸ್ಥಳವಿಲ್ಲ. ಪುನರಭಿವೃದ್ಧಿಯಾದ ಧಾರಾವಿಯಲ್ಲಿ "ಅಪಾಯಕಾರಿಯಲ್ಲದ ಮತ್ತು ಮಾಲಿನ್ಯವನ್ನು ಉಂಟುಮಾಡದಂತಹ" ಕೈಗಾರಿಕಾ ಘಟಕಗಳ ಪುನರ್ವಸತಿಗೆ ಸರ್ಕಾರವು ಒಪ್ಪಿದೆ. ಆದರೆ ಇದರ ಪರಿಣಾಮವೆಂದರೆ, ಕುಂಬಾರಿಕೆ, ಚರ್ಮದ ವಸ್ತುಗಳು ಮತ್ತು ಮರುಬಳಕೆಯನ್ನು ಕುರಿತ ಧಾರಾವಿಯ ಅತ್ಯಂತ ಪ್ರಮುಖ ಉದ್ಯಮಗಳು ಮುಚ್ಚಿಹೋಗುತ್ತವೆ. ಆದ್ದರಿಂದ, ಅನಧಿಕೃತ ನಿವಾಸಿಗಳಿಗಿಂತ "ಉತ್ಪಾದಕರು" ಧಾರಾವಿ ಯೋಜನೆಯ ಪ್ರತಿರೋಧದ ಕೇಂದ್ರ ಸ್ಥಾನದಲ್ಲಿದ್ದಾರೆ.

## ಕಾರ್ಮಿಕ ಪ್ರತಿರೋಧದ ಹೊಸ ವಿಧಿ-ವಿಧಾನಗಳು

ನಮ್ಮ ತಿಳಿವಳಿಕೆಯ ಪ್ರಕಾರ ಧಾರಾವಿ ಪ್ರತಿರೋಧವನ್ನು ಕೊಳಚೆ ಪ್ರದೇಶದ ನಿವಾಸಿಗಳ ಪ್ರತಿರೋಧ ಎನ್ನುವುದಕ್ಕಿಂತ "ಕಾರ್ಮಿಕರ" ಸಂಘಟನೆ ಎನ್ನುವುದು ಹೆಚ್ಚು ಸೂಕ್ತವಾದದ್ದು. ಪರಿಚಿತ ಕಾರ್ಮಿಕರ ಪ್ರತಿರೋಧ ಮತ್ತು ರೈತರ ಬಂಡಾಯದ ವ್ಯಾಪ್ತಿಯ ಹೊರಗೆ, ಶ್ರಮದ ಹೊಸ ಜಾಗದಲ್ಲಿ, ಅಂದರೆ, ಬಂಡವಾಳದ ವ್ಯಾಪ್ತಿಯ ಹೊರಗೆ ಸಿದ್ಧಾಂತೀಕರಿಸಿದೆಯೆಂಬ

ಊಹೆಯೊಂದಿಗೆ ಹೊರಹೊಮ್ಮುತ್ತಿರುವ "ಕಾರ್ಮಿಕ" ಸಂಘಟನಾ ಕ್ಷೇತ್ರದ ಸೂಚಕವಿದು. ಬಂಡವಾಳದ ಈ "ವ್ಯಾಪ್ತಿಯ ಹೊರಗು," ಸಾಂಪ್ರದಾಯಿಕ ಕಾರ್ಮಿಕವರ್ಗದ ಶಕ್ತಿಗಿಂತ ತಿರುಳಿನಲ್ಲೂ, ಶೈಲಿಯಲ್ಲೂ ವಿಭಿನ್ನವಾಗಿ ಅಭಿವ್ಯಕ್ತಿಸಲ್ಪಟ್ಟ ಕಾರ್ಮಿಕರ ಶಕ್ತಿಯ ಹೊಸ ತಾರ್ಕಿಕ ಸಮರ್ಥನೆಗಳನ್ನು ಮುಂದಿಡುತ್ತದೆ.

ಕಾರ್ಮಿಕವರ್ಗದ ಸಾಂಪ್ರದಾಯಿಕ ಶಕ್ತಿಯು ಬಂಡವಾಳಶಾಹಿ ವರ್ಗರಚನೆಯೊಳಗೆ ತನ್ನ ಸ್ಥಾನದಿಂದ ಪ್ರವಹಿಸುತ್ತದೆ. ಎರಿಕ್ ಓಲಿನ್ ರೈಟ್‌ರವರು (2000) ಸಾಂಘಿಕ ಮತ್ತು ರಾಚನಿಕ ಕಾರ್ಮಿಕವರ್ಗದ ಶಕ್ತಿಗಳ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತಾರೆ. ಕೂಲಿ ಕೆಲಸಗಾರರ ಮಾರುಕಟ್ಟೆಯಲ್ಲಿ ಅಥವಾ ಉತ್ಪಾದನಾ ವ್ಯವಸ್ಥೆಯ ವ್ಯಾಪ್ತಿಯಲ್ಲಿ, ಬಂಡವಾಳವಾದದ ಆರ್ಥಿಕ ಸಂಸ್ಥೆಗಳ ಪರಿಧಿಯಲ್ಲಿನ ತನ್ನ ಸ್ಥಾನಬಲದಿಂದ ರಾಚನಿಕ ಶಕ್ತಿಯು ಕಾರ್ಮಿಕವರ್ಗಕ್ಕೆ ಸಂಚಿತವಾಗುತ್ತದೆ. ಕಾರ್ಮಿಕರ ಮಾರುಕಟ್ಟೆ ಚೌಕಾಶಿಯ ಶಕ್ತಿಯು ನಿರುದ್ಯೋಗದ ಮಟ್ಟ ಹಾಗೂ ಲಾಭದಾಯಕವಾದ ಬಂಡವಾಳಶಾಹಿಯೇತರ ಜೀವನಾಧಾರ ಮೂಲಗಳ ಉಪಸ್ಥಿತಿಯನ್ನು ಅವಲಂಬಿಸಿರುತ್ತದೆ. ಭಾರತದ ಶ್ರಮಿಕರ ಮಾರುಕಟ್ಟೆಯ ಸಂದರ್ಭದಲ್ಲಿ, ಕೌಶಲ್ಯರಹಿತ ಕಾರ್ಮಿಕ ವರ್ಗಕ್ಕೆ ಅಂತಹ ಶಕ್ತಿಯು ಹೆಚ್ಚುಕಡಿಮೆ ಸಂಪೂರ್ಣವಾಗಿ ಗೈರುಹಾಜರಾಗಿದೆ. ರಾಚನಿಕ ಶಕ್ತಿಯ ಇನ್ನೊಂದು ರೂಪವು, ಕಾರ್ಮಿಕರ ಸ್ಥಳೀಯ ಪ್ರತಿರೋಧವು (ಮುಷ್ಕರಗಳು, "ನಿಯಮಕ್ಕೆ ತಕ್ಕಂತೆ ಕೆಲಸ") ಇಡೀ ಉತ್ಪಾದನಾ ಸರಪಳಿಯಲ್ಲಿ ರವಾನಿಸುವ ಏಕೀಕೃತ ಉತ್ಪಾದನಾ ವ್ಯವಸ್ಥೆಗಳ ಸಂದರ್ಭದಲ್ಲಿ ಹೊರಹೊಮ್ಮುತ್ತದೆ. ಇನ್ನೊಂದು ಕಡೆಯಲ್ಲಿ ಸಾಂಘಿಕ ಶಕ್ತಿಯಾದರೋ ಕಾರ್ಮಿಕ ಸಂಘಗಳು, ರಾಜಕೀಯ ಪಕ್ಷಗಳಂತಹ ಕಾರ್ಮಿಕರ ಸಾಮೂಹಿಕ ಸಂಘಟನೆಗಳ ರಚನೆಯಲ್ಲಿ ಸೃಷ್ಟಿಯಾತ್ತದೆ.

ಭಾರತದಲ್ಲಿನ ಔಪಚಾರಿಕ ಕ್ಷೇತ್ರದ ಕಾರ್ಮಿಕವರ್ಗದ ಶಕ್ತಿಯು ಪ್ರಾತಿನಿಧಿಕವಾಗಿ ಟ್ರೇಡ್ ಯೂನಿಯನ್‌ಗಳು ಮತ್ತು ರಾಜಕೀಯ ಪಕ್ಷಗಳ ಬೆಂಬಲದಿಂದ ಕೆಲಸದ ಸ್ಥಳದ ರಾಚನಿಕ ಶಕ್ತಿಯ ರೂಪವನ್ನು ಪಾರಂಪರಿಕವಾಗಿ ಪಡೆದುಕೊಂಡಿತ್ತು. ಔಪಚಾರಿಕ ಕ್ಷೇತ್ರದ ಕೆಲಸಗಾರರ ವರ್ಗದ ಸಾಂದರ್ಭಿಕ ನಿಯುಕ್ತಿ ಅಥವಾ ಸ್ಥಳೀಯ ಹಾಗೂ ಜಾಗತಿಕ ಉಪ-ಗುತ್ತಿಗೆ ಅಥವಾ ಹೊರ-ಗುತ್ತಿಗೆಯ ಮೂಲಕ ಜಾಗತೀಕರಣವು ಈ ರೀತಿಯ ಕಾರ್ಮಿಕ ವರ್ಗದ ಶಕ್ತಿಯನ್ನು ಅನೌಪಚಾರಿಕಗೊಳಿಸುವ ಮೂಲಕ ಅದನ್ನು ದುರ್ಬಲಗೊಳಿಸಿತು. ಸಿಲ್ವರ್‌ರವರು (2003), ಕಾರ್ಮಿಕವರ್ಗದ ಸಾಂಘಿಕ ಶಕ್ತಿಯ ಹೊಸ ನಿಯೋಜನೆಗಳು ಇಂತಹ ಉತ್ಪಾದನೆಯ ಅನೌಪಚಾರಿಕೀಕರಣವನ್ನು ವಿರೋಧಿಸಲು ಸಾಧ್ಯವೆಂದು ವಾದಿಸುತ್ತಾರೆ. ರಾಚನಿಕ ಶಕ್ತಿಯಲ್ಲಾಗಿರುವ ನಷ್ಟವನ್ನು ಸರಿದೂಗಿಸಲು ಸಾಂಘಿಕ ಶಕ್ತಿಯನ್ನು ಹೆಚ್ಚಿಸಬೇಕು. ಉದಾಹರಣೆಗೆ ಜವಳಿ ಕಾರ್ಮಿಕರು "ಸಾಕಷ್ಟು ಪರಿಮಿತ ರಾಚನಿಕ ಶಕ್ತಿಯನ್ನು ಹೊಂದಿದ್ದಾರೆ. ಉತ್ಪಾದನೆಯನ್ನು ಸುಲಭವಾಗಿ ಬೇರೆ ಮಾರ್ಗದಲ್ಲಿ ಸಾಗಿಸಬಹುದಾದ ಕಾರಣ, ಅವರು ಅದನ್ನು ಸರಿದೊಗಿಸಲು ತಮ್ಮ ಸಾಂಘಿಕ ಶಕ್ತಿಯನ್ನು ಬಲಪಡಿಸಿಕೊಳ್ಳಬೇಕಾಯಿತು" (ವೆಬ್‌ಸ್ಟರ್ ಮತ್ತು ಇತರರು 2008: 11-12). ಆ ರೀತಿಯಲ್ಲಿ ಸಾಂಘಿಕ ಶಕ್ತಿಯ ಸಶಕ್ತೀಕರಣವು, ಹೆಚ್ಚಾಗಿ ಸಮುದಾಯ ಆಧಾರಿತ ಸಂಘಟನಾ ವಿಧಾನದ ಮೂಲಕ ಕೆಲಸ ಮಾಡುತ್ತದೆ ಮತ್ತು ಸಂಘಟನೆಯ ಹೊಸ ಕಾರ್ಯತಂತ್ರಗಳನ್ನು ತೊಡಗಿಸಿಕೊಳ್ಳುತ್ತದೆ ಎಂದು ಸಿಲ್ವರ್ ಅವರು ವಾದಿಸುತ್ತಾರೆ.

ಅನುಕ್ರಮವಾಗಿ ಸಾಂಘಿಕ ಮತ್ತು ರಾಚನಿಕ ಶಕ್ತಿಯ ರೂಪಗಳಾದ ಸಾಂಕೇತಿಕ ಶಕ್ತಿ ಮತ್ತು ಸಂಚಾಲನಾ ಶಕ್ತಿಯ ಪರಿಕಲ್ಪನೆಗಳನ್ನು ಪರಿಚಯಿಸುವ ಮೂಲಕ ವೆಬ್‌ಸ್ಟರ್ ಮುಂತಾದವರು (2008: 12-13) ಸಿಲ್ವರ್ ಅವರ ವಾದವನ್ನು ವಿಸ್ತರಿಸುತ್ತಾರೆ. ಸಾಂಕೇತಿಕ ಶಕ್ತಿಯು, ಕೆಲಸ ಮಾಡುವ ಸ್ಥಳದಲ್ಲಿ "ನೈತಿಕ ಬೇಡಿಕೆಗಳನ್ನು ಮುಂದಿಟ್ಟು, ಅವುಗಳನ್ನು ಸರ್ವೇಸಾಮಾನ್ಯ ಸಾಮಾಜಿಕ ಬೇಡಿಕೆಗಳೆಂದು ಅಭಿವ್ಯಕ್ತಿಸುತ್ತಾ ತನ್ನ ಶಕ್ತಿಯನ್ನು ಪಡೆದುಕೊಳ್ಳುತ್ತದೆ." ಸಂಚಾಲನಾ ಶಕ್ತಿಯು ಒಂದು ರೀತಿಯ ರಾಚನಿಕ ಶಕ್ತಿಯೇ ಆಗಿದ್ದು, ಅದು ಉತ್ಪಾದನೆಗೆ ಅಗತ್ಯವಾದ ಸಾಗಾಣಿಕೆ (ರಸ್ತೆ) ಮತ್ತು ಸಂವಹನದ (ಅಂತರ್ಜಾಲ) ಮಾರ್ಗಗಳಿಗೆ ಅಡ್ಡಿಪಡಿಸುವ ಮೂಲಕ "ಕೆಲಸದ ತಾಣದಿಂದ ಕಾರ್ಯಾಚರಣೆಯನ್ನು ಹೊರಪಡಿಸಿ, ಕೆಲಸದ ತಾಣಗಳು ಸ್ಥಾಪಿತಗೊಂಡಿರುವ ಭೂಪ್ರದೇಶಕ್ಕೆ ವರ್ಗಾಯಿಸುತ್ತದೆ." ಸಾಂಕೇತಿಕ ಶಕ್ತಿ ಮತ್ತು ಸಾಗಾಣಿಕೆ ಶಕ್ತಿ ಎರಡು ಸಹ ಬಂಡವಾಳ-ಶ್ರಮದ ಸಂಬಂಧದಿಂದ ಹೊರಗಿರುವ ಬಂಡವಾಳಕ್ಕೆ ಮತ್ತು ಸಾರ್ವಜನಿಕ ಕ್ಷೇತ್ರಕ್ಕೆ ಪ್ರತಿರೋಧವನ್ನು ಒಯ್ಯುತ್ತವೆ (ಫೈನ್ 2006).

ಅದೇನೇ ಇರಲಿ, ಈ ಸಾಂಕೇತಿಕ ಮತ್ತು ಸಾಗಾಣಿಕೆ ಶಕ್ತಿಗಳ ಪರಿಕಲ್ಪನೆಗಳ ಈ ನಿಯೋಜನೆಯು ಸಹ ಬಂಡವಾಳದ ಮೂಲಕ ಶ್ರಮದ ಶೋಷಣೆಯನ್ನು ಪರ್ಯಾಲೋಚಿಸುತ್ತದೆ ಎಂದು ನಾವು ವಾದಿಸುತ್ತೇವೆ. ಇದು, ತನ್ನ ಶ್ರಮದ ಫಲಗಳ ಮೇಲೆ ತನಗಿರುವ ನ್ಯಾಯಯುತ ಹಕ್ಕಿನ ಬಗ್ಗೆ ಸಾರ್ವಜನಿಕ ಕ್ಷೇತ್ರದಲ್ಲಿ ಕೂಲಿ-ಕಾರ್ಮಿಕನ ಅಭಿವ್ಯಕ್ತಿ, ಅದರಿಂದ ಉತ್ಪಾದಿತಗೊಂಡ ಹಾಗೂ ಬಂಡವಾಳವು ವಿನಾಶಕರವಾಗಿ ವಶಪಡಿಸಿಕೊಂಡಿರುವ ಸಂಪತ್ತಿನ ಮೇಲೆ ಶ್ರಮಿಕನಿಗಿರುವ ನೈತಿಕ ಹಕ್ಕು. ಕೂಲಿ ಕೆಲಸದ ಅನೌಪಚಾರಿಕೀಕರಣವು ಕೂಲಿ-ಕೆಲಸಗಾರನಿಂದ ಮಿಗುತಾಯ ಮೌಲ್ಯದ ಹೆಚ್ಚಿನ ವಿನಿಯೋಗ ಮತ್ತು ಸೆಳೆತವನ್ನು ಬಂಡವಾಳಗಾರನ ಮೂಲಕ ಸಾಧ್ಯವಾಗಿಸುವ ಮೂಲಕ ಶ್ರಮದ ಶೋಷಣೆಯ ಪ್ರಮಾಣವನ್ನು ಹೆಚ್ಚಿಸಲು ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ. ಈ ಭಂಡತನದ, ನಾಚಿಕೆಗೆಟ್ಟ ಶೋಷಣೆಯ ಸ್ವರೂಪವು ಕಾರ್ಮಿಕ-ವರ್ಗದ ಮೂಲಕ ಸಾಂಕೇತಿಕ ಮತ್ತು ಸಂಚಾಲಕ ಶಕ್ತಿಯ ನಿಯೋಜನೆಗೆ ಕರೆ ನೀಡುತ್ತದೆ.

ಅನೌಪಚಾರಿಕ ಸಣ್ಣ ಉತ್ಪಾದಕರಾದರೋ, ಬಂಡವಾಳವನ್ನು ಹೊರಗಡೆಯಿಂದ ಪ್ರತಿರೋಧಿಸುತ್ತಾರೆ. ಅತಿಕ್ರಮಣಕಾರಿ ಬಂಡವಾಳದ ವಿರುದ್ಧ ಸೀಮೆಗಳನ್ನು ಮುಚ್ಚುವ ಸಂಘರ್ಷದಲ್ಲಿ ಅವರು ಯಾವಾಗಲೂ ಗಡಿರೇಖೆಯ ಮೇಲೆ ಉಪಸ್ಥಿತರಿದ್ದು, ಅದನ್ನು ಹಿಂದಕ್ಕೆ ತಳ್ಳುತ್ತಿರುತ್ತಾರೆ. ತನ್ನ ಸ್ವಯಂ ಮೌಲ್ಯವರ್ಧನೆ ಮತ್ತು ಪುನರುತ್ಪಾದನೆಯನ್ನು ಕುರಿತ ಬಂಡವಾಳದ ನ್ಯಾಯಯುತ ಒತ್ತಾಯ, - "ಆಸ್ತಿ ಸುಲಿಗೆಯ ಮೂಲಕ ಸಂಚಯನ"ದ (ಹಾರ್ವೆ-2205) ನಿಟ್ಟಿನಲ್ಲಿ ಮಾತ್ರವೇ ಅದರ ಸಾಧ್ಯವಾಗಿಸಿಕೊಳ್ಳುವಿಕೆ - ತಮ್ಮ ಜೀವನಾಧಾರವನ್ನು ಪುನರುತ್ಪಾದಿಸುವ ಸಣ್ಣ ಉತ್ಪಾದಕರ ನ್ಯಾಯಯುತ ಒತ್ತಾಯದೊಂದಿಗೆ ಸಂಘರ್ಷಿಸುತ್ತದೆ. ಇಲ್ಲಿ ಎರಡು ವಿಭಿನ್ನ ಉತ್ಪಾದನಾ ವ್ಯವಸ್ಥೆಗಳು ಒಂದು ಇನ್ನೊಂದರ ವಿರುದ್ಧ ನಿಂತಿವೆ. ಈ ಪ್ರತಿಯೊಂದೂ, ತನ್ನ ಸ್ವಂತ ನೈತಿಕ ಪ್ರತಿಪಾದನೆಯನ್ನು ವಿಶಾಲ ಸಮಾಜದ ಎದುರು ಮಂಡಿಸುತ್ತಿದೆ; ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ತನ್ನನ್ನು ಪ್ರಗತಿ ಮತ್ತು ಅಭಿವೃದ್ಧಿಯ ವಾಹಕವೆಂದು ಬಿಂಬಿಸಿಕೊಳ್ಳುತ್ತಿದೆ ಮತ್ತು ಸಣ್ಣ ಉತ್ಪಾದಕರು ಪರಾಧೀನ ಮಾಡಲಾಗದ, ಮನುಷ್ಯನ ಬದುಕುಳಿಯುವ ಹಕ್ಕನ್ನು ಎತ್ತಿಹಿಡಿಯುತ್ತಿದ್ದಾರೆ.

ವರ್ಜಿತ ಶ್ರಮದ ರಾಚನಿಕ ಶಕ್ತಿಯು, ಬಂಡವಾಳದ ಕ್ಷೇತ್ರವನ್ನು ಅತಿಕ್ರಮಿಸಬಲ್ಲ ತನ್ನ ಸಾಮರ್ಥ್ಯದಿಂದ ಉದ್ಭವಿಸುತ್ತದೆ; "ನೆಲಹಿಡಿದು ಕೂರುವುದು" ಪ್ರತಿರೋಧದ ಹೊಸ ಸ್ವರೂಪವಾಗುತ್ತದೆಯಲ್ಲದೆ, ಇದು, ಸಾಂಪ್ರದಾಯಿಕವಾಗಿ ನಗರದ ಬಡವರು ತಮ್ಮ ಬದುಕಿನ ಪ್ರಕ್ರಿಯೆಗಳ ಪುನರುತ್ಪಾದನೆಗಾಗಿ ಅಳವಡಿಸಿಕೊಂಡ ಕಾರ್ಯತಂತ್ರವಾಗಿದೆ. ಶ್ರಮಿಕ ಜನತೆಯ ಬೆಳೆಯುತ್ತಿರುವ ದೊಡ್ಡ ಭಾಗದ ಪಾಲಿಗೆ ಬದುಕಿನ ಪ್ರಕ್ರಿಯೆಗಳು ಮತ್ತು ಶ್ರಮದ ಪ್ರಕ್ರಿಯೆಗಳು ಗಹನವಾಗಿ ಹೆಣೆದುಕೊಂಡಿರುವ ಸಂದರ್ಭದಲ್ಲಿ ನೆಲ ಹಿಡಿದು ಕೂರುವುದು ಬಂಡವಾಳಕ್ಕೆ ಒಡ್ಡುವ ಪ್ರತಿರೋಧದ ಆಸಕ್ತಿಯುತ ಪ್ರತೀಕವನ್ನು ಒದಗಿಸುತ್ತದೆ. ಬಂಡವಾಳವು ಸಣ್ಣ ಉತ್ಪಾದಕರ ಆರ್ಥಿಕ ಸ್ಥಿತಿಯನ್ನು ಆಕ್ರಮಿಸುತ್ತಾ ಹೋದಂತೆ ಆಸ್ತಿವಿಹೀನರು ಆಸ್ತಿಯ ಮೇಲೆ ಸದ್ದಿಲ್ಲದೆ ಅತಿಕ್ರಮಣ ಮಾಡುತ್ತಾ ಪ್ರತಿಹೋರಾಟವನ್ನು ನಡೆಸುತ್ತಾರೆ. ಇಂತಹ ಅತಿಕ್ರಮಣಗಳು, ನಗರದ ವಲಸೆಗಾರರಿಂದ ಖಾಸಗಿ ಅಥವಾ ಸಾರ್ವಜನಿಕ ಸ್ಥಳದ "ವಸಾಹತುಗಾರಿಕೆ," ಬೀದಿಬದಿಯ ವ್ಯಾಪಾರಿಗಳಿಂದ ಕೃತಿಸ್ವಾಮ್ಯಗಳು ಅಥವಾ ವ್ಯಾಪಾರ ಚಿಹ್ನೆ(ಟ್ರೇಡ್‌ಮಾರ್ಕ್)ಗಳ ಕಳ್ಳತನ ಮುಂತಾದ ಸ್ವರೂಪಗಳನ್ನು ಪಡೆಯಬಹುದು. ಬಂಡವಾಳದ ವಿರುದ್ಧ ಮುನ್ನಡೆಯುತ್ತ, ಮತ್ತು ಆಸ್ತಿಯನ್ನು ಕಸಿದುಕೊಳ್ಳುವುದರ, ಒಕ್ಕಲೆಬ್ಬಿಸುವುದರ ವಿರುದ್ಧ ಮತ್ತೆ ಮತ್ತೆ ಹಿಂಸಾತ್ಮಕ ಬಂಡಾಯಗಳಲ್ಲಿ ತೊಡಗುತ್ತ ಈ ಸಾಂಘಿಕ ಶಕ್ತಿಯನ್ನು ಇಡೀ ಸಮುದಾಯದ ಹಂತಕ್ಕೆ ವೃದ್ಧಿಸಲಾಗುತ್ತದೆ. "ಅನೌಪಚಾರಿಕ" ಸಮುದಾಯಗಳ ಇಂತಹ ಸಾಮೂಹಿಕ ಕ್ರಿಯೆಗಳು ರಕ್ಷಣಾತ್ಮಕ (ವಸತಿಗಳನ್ನು ಬಿಟ್ಟುಕೊಡದಿರುವುದು) ಅಥವಾ ಆಕ್ರಮಣಶೀಲ ಆಂದೋಲನಗಳನ್ನು ಒಳಗೊಳ್ಳಬಹುದು (ಅನೌಪಚಾರಿಕ ಸಮುದಾಯಗಳಲ್ಲಿನ ಬದುಕನ್ನು ಉತ್ತಮಪಡಿಸಲು ಸಮಾಜದ ಸಂಪನ್ಮೂಲಗಳ ಮರುಹಂಚಿಕೆಯ ಕೋರಿಕೆ). ಈ ಪ್ರಕರಣದಲ್ಲಿ ಸಾಂಕೇತಿಕ ಶಕ್ತಿಯು "ಸ್ಥಳೀಯದ ನೈತಿಕತೆ"ಯನ್ನು ಜಾಗತಿಕ ಬಂಡವಾಳದ ಲಾಭಗಳಿಕೆಯ ತರ್ಕದ ವಿರುದ್ಧ ಹೋರಾಟಕ್ಕೆ ಸಜ್ಜುಗೊಳಿಸುವುದರಿಂದ ಉದ್ಭವಿಸುತ್ತದೆ (ಬಸು 2007) ಮತ್ತು ಇಡೀ ಸಮಾಜದ ದೈನಂದಿನ ಬದುಕು ಪುನರುತ್ಪಾದಿತವಾಗುವ ರಸ್ತೆಗಳಿಗೆ ಹೋರಾಟವನ್ನು ಕೊಂಡೊಯ್ಯುವ ಮೂಲಕ ಸಂಚಾಲನಾ ಶಕ್ತಿಯನ್ನು ಚಲಾಯಿಸಲಾಗುತ್ತದೆ.

## ಉಪಸಂಹಾರ

ಈ ಪ್ರಬಂಧದಲ್ಲಿ, ಕುಟುಂಬದ ಶ್ರಮವನ್ನು ಆಧರಿಸಿದ ಮತ್ತು ಕುಟುಂಬದ ವ್ಯಾಪ್ತಿಯಲ್ಲಿ ಸಂಘಟಿಸಲ್ಪಟ್ಟ ಶ್ರಮದ-ಸ್ವತಂತ್ರ ಅಲ್ಪ ಉತ್ಪಾದನೆಯ-ಹೊಸ ಸ್ಥಳವೊಂದನ್ನು ನಾವು ಗುರುತಿಸಲು ಪ್ರಯತ್ನಿಸಿದ್ದೇವೆ. ಹೊರಹೊಮ್ಮುತ್ತಿರುವ (ಬಂಡವಾಳದ ಜಾಗತಿಕ ಅಥವಾ ಸ್ಥಳೀಯ ಪರಿಧಿಯ ಹೊರ ಗುತ್ತಿಗೆಯ ವ್ಯವಸ್ಥೆಯಲ್ಲಿನ "ಮನೆ ಕೆಲಸಗಾರರು") ಅಥವಾ ಪ್ರಮುಖವಾಗಿ (ನಿಯತ ಅಥವಾ ತಾತ್ಕಾಲಿಕ ಕೂಲಿ ಕೆಲಸಗಾರರ ವರ್ಗ) ಮುಂದುವರಿದಿರುವ ಶ್ರಮದ ಇತರ ಸ್ಥಳಗಳನ್ನು ನಾವು ಅಲ್ಲಗಳೆಯುವುದಿಲ್ಲ. ಬದಲಿಗೆ, ನಾವು ಹೊಸ ಸ್ಥಳಗಳು ಹೊರಹೊಮ್ಮಲು ಸಾಧ್ಯವಾಗುವಂತೆ ಗಡಿರೇಖೆಗಳನ್ನು ಪುನರ್ರಚಿಸಿ ತನ್ಮೂಲಕ ಶ್ರಮಿಕಪಡೆಗಳ ಹೊಸ ಸ್ಥಳದ ಸ್ವರೂಪಕ್ಕೆ ಸಂಬಂಧಿಸಿದ ವಿವರಣೆಗಳನ್ನು ಮುಂದಿಡುತ್ತೇವೆ. ಹೊಸ ಸ್ಥಳಗಳು ಶ್ರಮ ಮತ್ತು ಬಂಡವಾಳದ ನಡುವೆ ಹೊಸ ಸಂಬಂಧಗಳನ್ನು ರೂಪಿಸುತ್ತವೆ. ಆದ್ದರಿಂದ ಬಂಡವಾಳವು ಮಿಗುತಾಯ ಮೌಲ್ಯವನ್ನು ಕೂಲಿ-ಕೆಲಸಗಾರರಿಂದ ವಶಪಡಿಸಿಕೊಳ್ಳುವ ಮೂಲಕ ಸದಾ ಅವರನ್ನು ಶೋಷಿಸಿದ್ದು,, ವಿಶ್ವವ್ಯಾಪಿತ ಬಂಡವಾಳವು ಕೂಲಿ ಮತ್ತು

ಸೌಲಭ್ಯಗಳನ್ನು ಕಡಿತಗೊಳಿಸುವ ಆಧಾರದಲ್ಲಿ ಶ್ರಮದ ಅತಿ-ಶೋಷಣೆಯನ್ನು ಒಳಗೊಂಡಂತೆ, ತನ್ನ ಕೂಲಿ ಕೆಲಸಗಾರರನ್ನು ತಾತ್ಕಾಲಿಕ ಉದ್ಯೋಗಿಕೀಕರಣಕ್ಕೆ ಗುರಿಮಾಡಿ ಶೋಷಣೆಯನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ಏರಿಸುತ್ತದೆ. ಅದೇ ಸಮಯದಲ್ಲಿ ಬಂಡವಾಳದ ಪರಿಧಿಗಳೊಳಗೆ-ಸ್ಥಳೀಯ ಹಾಗೂ ಜಾಗತಿಕ ಅನೌಪಚಾರಿಕೀಕರಣವು ಹೊರ-ಗುತ್ತಿಗೆಯ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಸಣ್ಣ ಉತ್ಪಾದಕರಿಂದ ಮಿಗುತಾಯವನ್ನು ಕಸಿದುಕೊಳ್ಳಲು ಬಂಡವಾಳಕ್ಕೆ ಅವಕಾಶ ನೀಡುತ್ತದೆ. ಇಷ್ಟಾಗಿಯೂ, ಈ ಎಲ್ಲ ಸಂಬಂಧಗಳಲ್ಲೂ ಮಿಗುತಾಯ ಮೌಲ್ಯ ಅಥವಾ ಲಾಭದ ಮೂಲ ಎನ್ನುವ ರೀತಿಯಲ್ಲಿ ಕಾರ್ಮಿಕರೊಂದಿಗೆ ಬಂಡವಾಳವು ತನ್ನ ಸಂಬಂಧವನ್ನು ಹೊಂದಿರುತ್ತದೆ. ನಾವು ಒತ್ತುನೀಡಿರುವ ಮತ್ತು ಶ್ರಮದ ಹೊಸ ಸ್ಥಳವನ್ನು ನಿರೂಪಿಸುವ ಸಂಬಂಧದಲ್ಲಿ, ಶ್ರಮಿಕನು ಇನ್ನುಮುಂದೆ ಮಿಗುತಾಯದ ಮೂಲವಾಗಿರುವುದಿಲ್ಲ, ಬದಲಿಗೆ ಶ್ರಮಿಕನು/ಳು ಆರ್ಥಿಕ ಸಂಪನ್ಮೂಲಗಳ ಅನಗತ್ಯ ಮಾಲೀಕ ಅಥವಾ ಅನುಭವದಾರನಾ/ಳಾಗಿದ್ದು, ಆ ಸಂಪನ್ಮೂಲಗಳನ್ನು ಬಂಡವಾಳದ ಪರಿಧಿಯೊಳಗೆ ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಅವನ್ನು ಅನಿರ್ಬಂಧಿತಗೊಳಿಸಲು, ಆತ/ಕೆಯನ್ನು ಅದರಿಂದ ದೂರೀಕರಿಸತಕ್ಕದ್ದು. ಹೀಗೆ ಅವರನ್ನು ಕಾರ್ಮಿಕವರ್ಗದವರನ್ನಾಗಿಸದೆ ಅಥವಾ ಶೋಷಣೆಗೆ ಗುರಿಮಾಡದೆ ಅವರ ಆಸ್ತಿ ಮೊದಲಾದವುಗಳ ಕಿತ್ತುಕೊಳ್ಳುವಿಕೆಯ ಪ್ರಕ್ರಿಯೆಯನ್ನು ನಾವು ಹೊರಗಿರಿಸುವಿಕೆ ಎಂದು ಉಲ್ಲೇಖಿಸುತ್ತೇವೆ. ಶ್ರಮಿಕ-ವರ್ಗದ ಈ ಚಿತ್ರಣವು ಕಾರ್ಮಿಕ ಚಳುವಳಿಗಳ ನೈಜ ಸಮಸ್ಯೆಯನ್ನು ಉಪಸ್ಥಿತಗೊಳಿಸುತ್ತದೆ. ಕೂಲಿ ಕೆಲಸ ಮತ್ತು ಬಂಡವಾಳದ ನಡುವಿನ ರೂಢಿಗತ ವೈರುಧ್ಯವನ್ನು ಬಂಡವಾಳ ಮತ್ತು ಹೆಚ್ಚುವರಿ ಶ್ರಮಿಕ ಶಕ್ತಿಯ ನಡುವಿನ ವೈರುಧ್ಯವು ಮರೆಮಾಡುತ್ತದೆ. ಸಾಂಪ್ರದಾಯಿಕವಾಗಿ ಕೂಲಿ-ಕೆಲಸದ ಶೋಷಣೆಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸುವ ಮಾರ್ಕ್ಸ್‌ವಾದಿ ವರ್ಗ ರಾಜಕಾರಣವು, ಶ್ರಮವನ್ನು ಹೊರಗಿರಿಸುವುದರ ಸುತ್ತಲೂ ರೂಪುಗೊಳ್ಳುತ್ತಿರುವ ಇನ್ನೊಂದು ಮಹಾನ್ ರಾಜಕೀಯ ಚಳವಳಿಯನ್ನು ನಿರ್ವಹಿಸಲಾಗುವಂತೆ ತನ್ನನ್ನೇ ಮತ್ತೊಮ್ಮೆ ಆವಿಷ್ಕರಿಸಿಕೊಳ್ಳಬೇಕು.

ವಿಶ್ವದಾದ್ಯಂತ-ಸಿಯಾಟಲ್, ಪ್ರಾಗ್, ವಾಷಿಂಗ್ಟನ್, ಜಿನೀವಾ ಮುಂತಾದವುಗಳ ಬೀದಿಗಳಲ್ಲಿ ನಾವು ಕಾಣುತ್ತಿರುವ ಬಂಡವಾಳಶಾಹಿ ಜಾಗತೀಕರಣದ ವಿರುದ್ಧದ ತೀವ್ರಗಾಮಿ ಸಂಘಟನೆಗಳು, ಮೆಕ್ಸಿಕೊದಲ್ಲಿನ ಝಪಟಿಸ್ಟ ಆಂದೋಲನದಿಂದ ಮೊದಲ್ಗೊಂಡು, ಸಿಂಗೂರ್ ಮತ್ತು ನಂದಿಗ್ರಾಮದ ರೈತ ಪ್ರತಿರೋಧದವರೆಗಿನ ಎಲ್ಲವೂ, ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ವ್ಯಾಪ್ತಿಯಲ್ಲಿನ ಶೋಷಣೆಗಿಂತಲೂ ಆಸ್ತಿ ಮುಂತಾದವುಗಳ ಸುಲಿಗೆ ಮತ್ತು ಜೀವನೋಪಾಯದ ಕಳೆತದ ವಿರುದ್ಧದ ಸಂಘಟನೆಗಳೆನಿಸಿವೆ. ಇಂತಹ ಸಂಘಟನೆಗಳ ಕಾರಕಗಳನ್ನು ಕಂಡುಹಿಡಿಯಲು ಅನೌಪಚಾರಿಕ ಸಣ್ಣ ಉತ್ಪಾದಕರ ಆರ್ಥಿಕತೆಯನ್ನು ಚಯನೋವಿಯನ್ ಮಾದರಿಯ ಬಾಹ್ಯ ಬಂಡವಾಳವೆಂದು ಗುರುತಿಸಿದ್ದೇವೆ. ಇದರ ಜೊತೆಗೆ, ನಗರ ಪ್ರದೇಶದ ಅನೌಪಚಾರಿಕ ಉತ್ಪಾದಕರ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳು ಪಾರಂಪರಿಕ ರೈತರದ್ದಕ್ಕಿಂತಲೂ ಭಿನ್ನವೆಂಬುದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಹೀಗೆ, ಅನೌಪಚಾರಿಕಗಳ ಸಮಕಾಲೀನ ರಾಜಕಾರಣವನ್ನು ಪರಿವರ್ತನೆಯ ನಿರೂಪಣೆಯ ವ್ಯಾಪ್ತಿಯ ಹೊರಗೆ ರೂಪಿಸಲಾಗಿದೆ

ಪೂರ್ಣಪ್ರಮಾಣದ ಬಂಡವಾಳಶಾಹಿ ರೂಪಾಂತರಕ್ಕೆ ಅಡ್ಡಿಯಾಗಿ ಯಾವ ರೀತಿಯ ವರ್ಗ ರಚನೆಗಳು ಕೆಲಸಮಾಡುತ್ತಿವೆ ಎಂಬಂತಹ ಪ್ರಶ್ನೆಗಳು ಸಾಂಪ್ರದಾಯಿಕವಾಗಿ ವಸಾಹತೋತ್ತರ ರಾಜಕಾರಣದಲ್ಲಿ ಪ್ರಾಬಲ್ಯವನ್ನು ಸಾಧಿಸಿವೆ. ಸಾಮ್ರಾಜ್ಯಶಾಹಿ ಪ್ರಾಬಲ್ಯವನ್ನು ಪ್ರತಿರೋಧಿಸಿ ರಾಷ್ಟ್ರೀಯ ಬಂಡವಾಳಶಾಹಿ ಅಭಿವೃದ್ಧಿಯನ್ನು ಆರಂಭಿಸಬಲ್ಲ ರಾಷ್ಟ್ರೀಯ ಮಧ್ಯಮ ವರ್ಗವಿದೆಯೇ? ಆ ಕಾರ್ಯಕ್ಕೆ, ಮಧ್ಯಮ ವರ್ಗವು ಅಪರ್ಯಾಪ್ತವಾಗಿದ್ದಲ್ಲಿ, ರೈತ ಮತ್ತು ಕಾರ್ಮಿಕ-ವರ್ಗದ ಒಕ್ಕೂಟವೊಂದು ಜನರ ಪ್ರಜಾತಾಂತ್ರಿಕ ಕ್ರಾಂತಿಯೊಂದನ್ನು ಉಂಟುಮಾಡಬಲ್ಲದೇ? ಈ ಪ್ರಶ್ನೆಗಳನ್ನು ಸುತ್ತುವರೆದಂತೆ ಪರಿವರ್ತನೆಯ ರಾಜಕೀಯವನ್ನು ನಿರೂಪಿಸಲಾಗಿತ್ತು. ಈಗಲೂ ಇದು, ಸಮಕಾಲೀನ ಹೋರಾಟಗಳನ್ನು ಅಭಿವ್ಯಕ್ತಿಸುವ ಪ್ರಬಲ ರಾಜಕೀಯ ಪರಿಭಾಷೆಯಾಗಿದೆ. ಉದಾಹರಣೆಗಾಗಿ ಪಶ್ಚಿಮ ಬಂಗಾಳದ ಸಿಂಗೂರ್ ಮತ್ತು ನಂದಿಗ್ರಾಮದ ಪ್ರಕರಣವನ್ನು ಗಮನಿಸೋಣ. ಇಲ್ಲಿ ಸರ್ಕಾರವು ಉದ್ದೇಶಿತ ವಿಶೇಷ ಆರ್ಥಿಕ ವಲಯಗಳಿಗಾಗಿ (ಎಸ್‌ಇಜೆಡ್) ಮತ್ತು ಆಧುನಿಕ ಕಾರ್ಖಾನೆಗಳಿಗಾಗಿ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನ ತೀವ್ರವಾದ ರಾಜಕೀಯ ಮತ್ತು ಸಾಮಾಜಿಕ ಕ್ಷೋಭೆಗೆ ಕಾರಣವಾಯಿತು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡೂ ಸಹ ಸಂಘರ್ಷವನ್ನು ರೂಢಿಗತ ರೈತ ಆರ್ಥಿಕತೆ ಮತ್ತು ಬಂಡವಾಳಶಾಹಿ ಆರ್ಥಿಕತೆಯ ನಡುವಿನ ಸೆಣೆಸಾಟವೆಂದು ಬಿಂಬಿಸುವುದರಲ್ಲಿ ತಲ್ಲೀನವಾಗಿವೆ. ಆಳುವ ಪಕ್ಷದ ಪ್ರಕಾರ ಬಂಡವಾಳಶಾಹಿ ಕೈಗಾರಿಕೀಕರಣವು ದಾರಿದ್ರ್ಯದಲ್ಲಿರುವ ರೈತ ಆರ್ಥಿಕತೆಯನ್ನು ಬದಲಾಯಿಸುತ್ತದೆ; ತನ್ಮೂಲಕ ಮುಂದುವರಿದ, ಚಲನಶೀಲ ಉತ್ಪಾದನಾ ವಿಧಾನಕ್ಕೆ ದಾರಿಮಾಡುತ್ತದೆ. ಇನ್ನೊಂದು ಕಡೆ ವಿರೋಧ ಪಕ್ಷವು ರೈತಾಪಿ ಆರ್ಥಿಕತೆಯು ತನ್ನ ಭೂಮಿಯ ಪರಾಧೀನಗೊಳಿಸುವಿಕೆಯನ್ನು ಪ್ರತಿರೋಧಿಸಬೇಕು ಎನ್ನುತ್ತದೆ. ಎರಡೂ ಕಡೆಗಳ ವಾದಗಳು ನಮಗೆ ಲೆನಿನ್-ನರೊದ್ನಿಕ್ಸರ ಚರ್ಚೆಯನ್ನು ನೆನಪಿಸುತ್ತವೆ.

ನಮ್ಮ ತಿಳಿವಳಿಕೆಯ ಪ್ರಕಾರ ಸಿಂಗೂರ್ ಮತ್ತು ನಂದಿಗ್ರಾಮದ ಸಮಕಾಲೀನ ರೈತರ ಕುರಿತಾದ ಸಮಾಜತತ್ವವು ಬ್ರಿಟಿಷ್ ಆಳ್ವಿಕೆಯಲ್ಲಿನ 19ನೇ ಶತಮಾನದ ಬಂಡುಕೋರ ರೈತರದ್ದಕ್ಕಿಂತ ತೀರ ಭಿನ್ನವಾಗಿದೆ. ಇಲ್ಲಿ ನಡೆಯುತ್ತಿರುವುದು ಒಂದು ಉತ್ಪಾದನಾ ವಿಧಾನದಿಂದ ಮೇಲ್ಮಟ್ಟದ ವಿಧಾನಕ್ಕೆ ರೂಪಾಂತರಗೊಳ್ಳುವ ಪ್ರಕ್ರಿಯೆಯನ್ನು ಕುರಿತ ರಾಜಕೀಯ ಸಂಘರ್ಷವಲ್ಲ. ಬದಲಿಗೆ ಸಂಘರ್ಷಕ್ಕೆ ಕೇಂದ್ರಸ್ಥವಾಗಿರುವ ಸಂಗತಿಯೆಂದರೆ ರೂಪಾಂತರದ ಅಸಾಧ್ಯತೆಯ ಗುರುತಿಸುವಿಕೆ. ಅಂದರೆ, ಈ ಪ್ರಕ್ರಿಯೆಯು ದುಡಿಯುವ ಜನತೆಯ ಬಹುದೊಡ್ಡ ಭಾಗವನ್ನು ಮಹಾನ್ ರೂಪಾಂತರದ ಚಲನಶೀಲತೆಯ ಹೊರಗೇ ಉಳಿಸುವ ಶ್ರಮಜೀವೀಕರಣರಹಿತವಾಗಿ ಆಸ್ತಿ ಮುಂತಾದವುಗಳ ಕಿತ್ತುಕೊಳ್ಳುವಿಕೆಯ ಪ್ರಕ್ರಿಯೆಯ ಗುರುತಿಸುವಿಕೆ. ಪ್ರಸ್ತಾಪಿತ ಪರಿಹಾರದ ಪ್ಯಾಕೇಜ್‌ನಿಂದ ಹೊರಪಡಿಸಿದ ಭೂವಿಹೀನ ಕೃಷಿ ಕಾರ್ಮಿಕರ ಸಂಘಟನೆಯಲ್ಲಿನ ಉಪಸ್ಥಿತಿಯಿಂದಷ್ಟೇ ಅಲ್ಲದೆ, ಯಾವುದೇ ಮಾಲೀಕತ್ವದ ಹಕ್ಕಿಲ್ಲದೆ ಅರ್ಜಿಸಿದ ಭೂಮಿಯಲ್ಲಿ ವಿವಿಧ ಸ್ವರೂಪಗಳ ಕೃಷಿಯೇತರ ಉದ್ಯೋಗಗಳಿಂದ ಜೀವನಾಧಾರವನ್ನು ಪಡೆದುಕೊಳ್ಳುತ್ತಿದ್ದ ಜನರಿಂದಲೂ ಸಿಂಗೂರಿನ ಪ್ರತಿರೋಧವು ತನ್ನ ಶಕ್ತಿಯ ಬಹುದೊಡ್ಡ ಭಾಗವನ್ನು ಪಡೆದುಕೊಂಡಿತು. ಇದನ್ನು ಕೇವಲ ದೊಡ್ಡ ಬಂಡವಾಳದ ವಿರುದ್ಧದ ರೈತರ ಪ್ರತಿರೋಧ ಎಂದು ವಿವರಿಸುವುದು ದಾರಿತಪ್ಪಿಸಿದಂತಾಗುತ್ತದೆ; ಏಕೆಂದರೆ ಇಂತಹ ವಿವರಣೆಯು, ಇದು,

ಬಂಡವಾಳದ ಪರಿಧಿಯಿಂದ ಹೊರಗೆ ಸ್ಥಾಪಿತಗೊಂಡು ಬಂಡವಾಳಶಾಹಿ ಅತಿಕ್ರಮಣದ ವಿರುದ್ಧ ತನ್ನ ಜೀವನಾಧಾರದ ನಿಟ್ಟಿನ ಉತ್ಪಾದನಾ ಚಟುವಟಿಕೆಯನ್ನು ರಕ್ಷಿಸಿಕೊಳ್ಳುತ್ತಿರುವ ಹೊರಗಿರಿಸಲ್ಪಟ್ಟ ಶ್ರಮಿಕರ ಪ್ರತಿರೋಧವೂ ಹೌದು ಎಂಬ ವಿಷಯವನ್ನು ನಮ್ಮ ದೃಷ್ಟಿಯಿಂದ ಮರೆಮಾಚುತ್ತದೆ. ಈ ಅರ್ಥದಲ್ಲಿ ಧಾರಾವಿಯ ಪ್ರತಿರೋಧ, ವಿವಿಧ ಸರಕಿನ ಮಳಿಗೆ ಹಾಗೂ ಶಾಪಿಂಗ್ ಮಾಲ್‌ಗಳ ವಿರುದ್ಧ ಸಣ್ಣ ಚಿಲ್ಲರೆ ವ್ಯಾಪಾರಿಗಳ ಸೆಣೆಸಾಟ ಮತ್ತು ಸಿಂಗೂರ್ ಹಾಗೂ ನಂದಿಗ್ರಾಮದ ಗ್ರಾಮೀಣ ಪ್ರತಿರೋಧ ಇವೆಲ್ಲವುಗಳ ಮೂಲಕ ಸಾಗುವ ನಿರಂತರತೆಯ ಒಂದು ಪಾರಸ್ಪರಿಕ ಸಂಬಂಧವಿದೆ.

ಜಾಗತೀಕರಣದ ಶಕ್ತಿಗಳು ಉತ್ಪಾದನಾ ಆರ್ಥಿಕತೆಯ ಸಂಘಟನೆಯಲ್ಲಿ ಬೃಹತ್ ಬದಲಾವಣೆಗಳನ್ನು ತಂದಿವೆ. ಇದರಿಂದಾಗಿ ಶ್ರಮದ ಅನೇಕ ಸ್ಥಳಗಳು ಹೊರಹೊಮ್ಮಿವೆ ಮತ್ತು ಈ ಕಾರಣದಿಂದಾಗಿ, ಶ್ರಮ ಮತ್ತು ಬಂಡವಾಳದ ನಡುವಿನ ವೈರುಧ್ಯದಲ್ಲಿ ಬಹುತ್ವವಿದೆ. ಜಾಗತೀಕರಣವು ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳ ವ್ಯಾಪ್ತಿಯಲ್ಲಿನ ಕಾರ್ಮಿಕವರ್ಗದ ಶಕ್ತಿಯ ಪಾರಂಪರಿಕ ಸ್ವರೂಪಗಳನ್ನು ದುರ್ಬಲಗೊಳಿಸಿದ್ದರೂ, ಉಭಯ ಚಲನೆಯಲ್ಲಿ ಅದು, ಶ್ರಮವು ತನ್ನ ಹೊಸದಾಗಿ ಹೊರಹೊಮ್ಮಿದ ಸ್ಥಳಗಳಿಂದ ಹೊರಗಿನಿಂದಲೇ ಬಂಡವಾಳವನ್ನು ಎದುರಿಸಬಲ್ಲ ಕಾರ್ಮಿಕ ಸಕ್ರಿಯತೆಯ ಕ್ಷೇತ್ರಗಳನ್ನು ತೆರೆದಿದೆ. ಕಾರ್ಮಿಕ ಸಕ್ರಿಯತೆಯ ಪಾರಂಪರಿಕ ಸ್ವರೂಪಗಳನ್ನು ಕಳೆದುಕೊಂಡಿದ್ದರಿಂದ ಉಂಟಾಗುವ ಎದೆಗುಂದುವಿಕೆಯು, ಬಂಡವಾಳದ ವಿರುದ್ಧದ ಹೊಸ ಸ್ವರೂಪಗಳ ಅಪಾರ ಸಾಧ್ಯತೆಗಳನ್ನು ಮರೆಮಾಡಲು ಬಿಡಬಾರದು.

---

[i] ಜಾಗತೀಕರಣಪೂರ್ವ ಕಾಲಘಟ್ಟದಲ್ಲಿ, ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಲ್ಲಿ ಮತ್ತು ಅಭಿವೃದ್ಧಿಶೀಲ ಆರ್ಥಿಕತೆಗಳ ಕೆಲವು ಪರಾವೃತಭಾಗಗಳಲ್ಲಿ, ಉದಾ: ರಾಜ್ಯದ ಉದ್ಯಮಗಳಲ್ಲಿ ಮತ್ತು ಬೃಹತ್ ಕಾರ್ಪೊರೇಟ್ ಉದ್ಯಮಗಳಲ್ಲಿ ಫೋರ್ಡ್ ಮಾದರಿಯ ಬಂಡವಾಳ-ಶ್ರಮದ ಸಂಬಂಧಗಳು ಅಸ್ತಿತ್ವದಲ್ಲಿದ್ದವು.

[ii] ಸಾಂಪ್ರದಾಯಿಕ ವಲಯದಲ್ಲಿ ಹೆಚ್ಚುವರಿ ಶ್ರಮಿಕ ವರ್ಗವು ಅಸ್ತಿತ್ವದಲ್ಲಿರುವುದರಿಂದ ಉತ್ಪನ್ನದಲ್ಲಿ ನಷ್ಟವಾಗದಂತೆ ಈ ವಲಯದಿಂದ ಶ್ರಮವನ್ನು ಹಿಂತೆಗೆದುಕೊಳ್ಳಬಹುದು. ಆದಾಗ್ಯೂ, ಸಾಂಪ್ರದಾಯಿಕ ಕ್ಷೇತ್ರದಲ್ಲಿನ ಪ್ರತಿ ವ್ಯಕ್ತಿಯ ಆಹಾರದ ಬಳಕೆಯನ್ನು ಸ್ಥಿರವಾಗಿರಿಸಿ, ಹೊಸ ಕಾರ್ಮಿಕರಿಗೆ ಆಹಾರವನ್ನು ಒದಗಿಸಲು, ಹೆಚ್ಚುವರಿ ಆಹಾರವನ್ನು ಆಧುನಿಕ ವಲಯಕ್ಕೆ ವಿನಿಯೋಗಿಸುವ ನಿಟ್ಟಿನಲ್ಲಿ ಮಿಗುತಾಯ ಶ್ರಮದ ಸೆಳೆಯುವಿಕೆಯ ಕಾರ್ಯವಿಧಾನವನ್ನು ಕೈಗೊಳ್ಳತಕ್ಕದ್ದು. ಲೂಯಿಸ್ ಅವರ ಪ್ರಕಾರ ಮರೆಮಾಚಿದ ನಿರುದ್ಯೋಗವು ಈ ಪರಿಸ್ಥಿತಿಗಳಲ್ಲಿ “ಗೋಪ್ಯ ಉಳಿತಾಯ”ವನ್ನು ಒದಗಿಸುತ್ತದೆ. ಅದನ್ನು “ಖರ್ಚಿಲ್ಲದ” ರೀತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಲು ಉಪಯೋಗಿಸಬೇಕು.

[iii] ಕಾನೂನಾತ್ಮಕ ದೃಷ್ಟಿಕೋನದ ಪರಿಧಿಯಲ್ಲಿ ಎರಡು ಪ್ರತಿಸ್ಪರ್ಧಿ ಅಭಿಪ್ರಾಯಗಳು ಇರುವುದರಲ್ಲಿ ಆಶ್ಚರ್ಯವೇನಿಲ್ಲ. ಹರ್ನಾಂಡೊ ಡೆ ಸೊಟೊ (1989) ಅವರು ಅತ್ಯಂತ ಉತ್ತೇಜಕವಾಗಿ ವಾದಿಸಿರುವ ಒಂದು ಅಭಿಪ್ರಾಯದ ಪ್ರಕಾರ, ನಿಯಂತ್ರಣಗಳೇ ಪ್ರಭುತ್ವದ ಅತಿಯಾದ ಮಧ್ಯಪ್ರವೇಶವಾದಿ ಸ್ವರೂಪವನ್ನು ಬಿಂಬಿಸುತ್ತಿದ್ದು, ಅವು ಅನೌಪಚಾರಿಕ ವಲಯದ ಚಲನಶೀಲ ಬೆಳವಣಿಗೆಗೆ ಅಡ್ಡಿಯಾಗಿವೆ ಮತ್ತು ಮೇಲ್ವರ್ಗವೊಂದರ ಆದರೆ ಸಣ್ಣಪ್ರಮಾಣದ ಔಪಚಾರಿಕ ವಲಯದ ಪರವಾಗಿವೆ. ಹೀಗಾಗಿ ಡಿ ಸೊಟೊ ಅವರು, “ಬಡವರು ಅತಿ ಉತ್ಸಾಹಿ, ಅಧಿಕಾರಶಾಹಿ ಮತ್ತು ವಿಪರೀತ ಅದಕ್ಷವೆನಿಸಿದ ಕಾನೂನು ವ್ಯವಸ್ಥೆಯ ಬಲಿಪಶುಗಳಾಗಿದ್ದಾರೆ ಎಂದು ವಾದಿಸುತ್ತಾ, ಬಹುತೇಕ ಅಕ್ರಮ ಉದ್ಯಮದ ಕಾರ್ಯಾಚರಣೆಗಳಿಗೆ ಮತ್ತು ನೆಲಕಚ್ಚಿಕೂರುವ ಪ್ರತಿಭಟನೆಗೆ ನಿಯಂತ್ರಣಗಳ ಸಡಿಲಿಕೆ, ನಿರಪರಾಧೀಕರಣ ಹಾಗೂ ತ್ವರಿತ ಕಾನೂನು ಪರಿಹಾರಗಳೆಂದು ಸಮರ್ಥಿಸುತ್ತಾರೆ” (ಬ್ರಾಮ್ಲೆ 190: 332). ಇದಕ್ಕೆ ತದ್ವಿರುದ್ಧ ಅಭಿಪ್ರಾಯ ಹೊಂದಿರುವ

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಐಎಲ್‌ಓ), ಔಪಚಾರಿಕ ಆರ್ಥಿಕತೆಯ ನಿಯಂತ್ರಣ ಚೌಕಟ್ಟಿನೊಳಗೆ ತರಲಾಗುವಂತೆ, ನೀತಿಗಳು, ಅನೌಪಚಾರಿಕ ವಲಯದ ವ್ಯಾಪ್ತಿಯಲ್ಲಿನ ಆದಾಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿರತಕ್ಕದ್ದು ಎಂದು ವಾದಿಸುತ್ತದೆ.

[iv] ಮಾರ್ಕ್ಸ್‌ವಾದಿ ಸಿದ್ಧಾಂತಗಳಲ್ಲಿ, "ಸಾಮಾಜಿಕ ಸಂರಚನೆಗಳು" ಎಂಬ ಕಲ್ಪನೆಯು, ವಿಭಿನ್ನ ಉತ್ಪಾದನಾ ವಿಧಾನಗಳ ಅಭಿವ್ಯಕ್ತಿಯಿಂದ ಚಿತ್ರಿಸಲ್ಪಡುವ ಸಮಾಜದ ಸಂಕೀರ್ಣ ರಚನೆಗೆ ಅನ್ವಯಿಸುತ್ತದೆ.

[v] ಸಣ್ಣ ಉತ್ಪಾದನೆಯು ಮುಂದುವರೆದಿರುವೆಡೆಗಳಲ್ಲಿ, ಮಾರ್ಕ್ಸ್‌ವಾದಿಗಳು ಆ ನಿಟ್ಟಿನ ವಸಾಹತೋತ್ತರ ಬಂಡವಾಳಶಾಹಿ ಅಭಿವೃದ್ಧಿಯ ವಿಲಕ್ಷಣ ಸ್ವರೂಪವನ್ನು ದೂರುತ್ತಾರೆ. ಉದಾಹರಣೆಗೆ ಸಣ್ಣ ಉತ್ಪಾದನೆಯ ಪ್ರಾಬಲ್ಯ ಮುಂದುವರಿಕೆಯನ್ನು ಸಾಮ್ರಾಜ್ಯವಾದಿ ವಿದೇಶಿ ಬಂಡವಾಳಕ್ಕೆ ಅಧೀನವಾಗಿರುವ ವಸಾಹತೋತ್ತರ ದೇಶಗಳಲ್ಲಿ ಬಂಡವಾಳಶಾಹಿ ಅಭಿವೃದ್ಧಿಗೆ ಇರುವ ಅವಲಂಬಿತ ಅಥವಾ ಪರಿಧೀಯ ಸ್ವರೂಪದಿಂದ ವಿವರಿಸಲಾಗುತ್ತದೆ.

[vi] "ಇದಲ್ಲದೆ ಬಂಡವಾಳಶಾಹಿ ಉತ್ಪಾದನೆಯ ಬೆಳವಣಿಗೆಯು ನಿರ್ದಿಷ್ಟ ಕೈಗಾರಿಕಾ ಉದ್ಯಮದಲ್ಲಿ ಹೂಡಿರುವ ಬಂಡವಾಳದ ಪ್ರಮಾಣವು ನಿರಂತರವಾಗಿ ಹೆಚ್ಚುವಂತೆ ಮಾಡುತ್ತದೆ. ಮತ್ತು ಪ್ರತಿಯೊಬ್ಬ ಬಂಡವಾಳಗಾರನೂ ಸಹ ಸ್ಪರ್ಧೆಯಿಂದಾಗಿ, 'ಬಾಹ್ಯ ಒತ್ತಾಯದ ನಿಯಮಗಳು' ಎಂಬ ನಿಟ್ಟಿನಲ್ಲಿ ಬಂಡವಾಳಶಾಹಿ ಉತ್ಪಾದನೆಯ ಅಂತರ್ಗತ ನಿಯಮಗಳನ್ನು ಅನುಭವಿಸುತ್ತಾನೆ. ಅದನ್ನು ಉಳಿಸಿಕೊಳ್ಳಲು, ನಿರಂತರವಾಗಿ ಅದನ್ನು ವಿಸ್ತರಿಸುತ್ತಲೇ ಇರುವಂತೆ ಆತನನ್ನು ಅದು ಒತ್ತಾಯಿಸುತ್ತದೆ. ಆದರೆ ಪ್ರಗತಿಶೀಲ ಸಂಚಯವಿಲ್ಲದಿದ್ದಲ್ಲಿ, ಅದನ್ನು ವಿಸ್ತರಿಸಲು ಸಾಧ್ಯವಿಲ್ಲ" (ಮಾರ್ಕ್ಸ್ 1883: 565, ಒತ್ತನ್ನು ಸೇರಿಸಲಾಗಿದೆ).

[vii] ರೈತಾಪಿ ವರ್ಗದೊಳಗೆ ವಿವಿಧತೆಯಿದೆ. ಭಾರತೀಯ ಕೃಷಿಯು ಪ್ರಮುಖವಾಗಿ ರೈತಾಪಿ ಆರ್ಥಿಕತೆಯಾಗಿದ್ದು, ಬೃಹತ್ ಪ್ರಮಾಣದ ಬಂಡವಾಳಶಾಹಿ ಕೃಷಿ ವಿಧಾನವು ಪರಿಮಿತ ಪ್ರಮಾಣದಲ್ಲಿ ಅಸ್ತಿತ್ವದಲ್ಲಿದೆ. ವಾಸ್ತವವಾಗಿ, ಕೂಲಿಗಾರರನ್ನು ನೇಮಿಸಿಕೊಳ್ಳುವವರು, ದೊಡ್ಡ ಮತ್ತು ಮಧ್ಯಮ ರೈತರು (ಎರಡು ಹೆಕ್ಟೇರಿಗಿಂತ ಹೆಚ್ಚಿನ ಭೂಮಿ ಇರುವವರು). ಅಂಚಿನಲ್ಲಿರುವ ರೈತರು (0.4ರಿಂದ 1 ಹೆಕ್ಟೇರ್ ಭೂಮಿ) ಮತ್ತು ಸಣ್ಣ ರೈತರು (1.00ರಿಂದ 2 ಹೆಕ್ಟೇರ್) 86%ರಷ್ಟಿದ್ದು, ಇವರು ಜೀವನಾಧಾರದ ನಿಟ್ಟಿನ ರೈತರಾಗಿದ್ದು ಬಹಳಷ್ಟು ಸಲ ಭೂಮಿಯಿಂದ ತಮಗೆ ಬರುವ ಆದಾಯಕ್ಕೆ ಪೂರಕವಾಗಿ, ಕೂಲಿಗೆಲಸವನ್ನು ಆಶ್ರಯಿಸುತ್ತಾರೆ. ನಮ್ಮ ತಿಳಿವಳಿಕೆಯ ಪ್ರಕಾರ ಸಣ್ಣ ಮತ್ತು ಅಂಚಿನಲ್ಲಿರುವ ರೈತರು ನಿಜಕ್ಕೂ ಭಾರತದ ಸ್ವಯಂ ಶೋಷಕ ರೈತ ಆರ್ಥಿಕತೆಯನ್ನು ರೂಪಿಸುತ್ತಾರೆ.

[viii] 1993-94ರಲ್ಲಿ ಕೃಷಿ ಕೆಲಸಗಾರರಲ್ಲಿ ಶೇ. 60.1ರಷ್ಟು ರೈತರಿದ್ದು, 1999-2000ರಲ್ಲಿ ಇವರ ಪ್ರಮಾಣವು ಶೇ. 57.8ರಷ್ಟಿದ್ದು, 2004-05ರಲ್ಲಿ, 64.2%ರಷ್ಟಿದೆ (ಎನ್‌ಸಿಇಯುಎಸ್-2007).

[ix] ಭಾರತದಲ್ಲಿನ ಉದ್ಯೋಗ ಮತ್ತು ನಿರುದ್ಯೋಗದ ಸನ್ನಿವೇಶ, ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, ಕಾರ್ಮಿಕ ಸಚಿವಾಲಯ, ಭಾರತ ಸರ್ಕಾರ, http://dget.nic.in/dex/empscenario.pdf

[x] ಗ್ರಾಮೀಣ ಕುಟುಂಬಗಳಲ್ಲಿ ಕೇರಳ, ಅತಿ ಕಡಿಮೆ ಸರಾಸರಿ ಭೂಮಿಯನ್ನು ಹೊಂದಿದೆ (0.25 ಹೆಕ್ಟೇರ್), ನಂತರ ಪಶ್ಚಿಮ ಬಂಗಾಳ (0.31 ಹೆಕ್ಟೇರ್), ತಮಿಳುನಾಡು (0.34 ಹೆಕ್ಟೇರ್), ಉತ್ತರಾಖಂಡ್ (0.47 ಹೆಕ್ಟೇರ್), ಬಿಹಾರ (0.52 ಹೆಕ್ಟೇರ್) ಮತ್ತು ಒರಿಸ್ಸಾ (0.58ಹೆಕ್ಟೇರ್) (ಎನ್‌ಎಸ್‌ಎಸ್‌ಓ 2006).

[xi] ಅಂಚಿನಲ್ಲಿರುವ ರೈತರು ಮತ್ತು ಸಣ್ಣ ರೈತರ ಕುಟುಂಬಗಳು ಅನುಕ್ರಮವಾಗಿ ತಿಂಗಳಿಗೆ 435 ರೂ. ಮತ್ತು 1578 ರೂ.ಗಳನ್ನು ಕೃಷಿಯಿಂದ ಸಂಪಾದಿಸುತ್ತಾರೆ. ಅದೇ ಸಮಯದಲ್ಲಿ ಅವರು ಕೊಂಡುಕೊಳ್ಳುವ ಒಳಸುರಿಗಳ ಹಂಚಿಕೆಯ ಹೆಚ್ಚಳದಿಂದಾಗಿ ಕೃಷಿವೆಚ್ಚವು ವೃದ್ಧಿಸುತ್ತಿದ್ದು, ಇದರಿಂದಾಗಿ ಕೃಷಿಯು ಕಾರ್ಯಸಾಧ್ಯವಲ್ಲದ ಆರ್ಥಿಕ ಚಟುವಟಿಕೆಯಾಗಿದೆ. 2003ರಲ್ಲಿ, ಅನುತ್ಪಾದಕ ಸಾಲಗಳು (ಬಳಕೆಯ ಉದ್ದೇಶಕ್ಕಾಗಿ) ಶೇ. 43ರಷ್ಟಿದ್ದು, 2003ರಲ್ಲಿ, ಅಂಚಿನಲ್ಲಿರುವ ಮತ್ತು ಸಣ್ಣ ರೈತರ ಬಾಕಿಯಿರುವ ಸಾಲಗಳ ಶೇ. 29ರಷ್ಟಿದೆ (ಎನ್‌ಎಸ್‌ಎಸ್‌ಓ 2006).

[xii] ಆವಾಸಸ್ಥಾನವನ್ನು ಕುರಿತ ವಿಶ್ವಸಂಸ್ಥೆಯ ವರದಿಯ ಪ್ರಕಾರ (2003), 2020ರ ವೇಳೆಗೆ ನಗರೀಕರಣದ ಪ್ರಸ್ತಾಪಿತ ಹಂತವು 56%ರಷ್ಟಿದ್ದು, 4.24 ಬಿಲಿಯನ್ ಜನರು ನಗರಗಳಲ್ಲಿ, 3.34 ಬಿಲಿಯನ್ ಜನರು ಗ್ರಾಮೀಣ ಪ್ರದೇಶಗಳಲ್ಲಿರುತ್ತಾರೆ. 2020ರ ನಂತರ ಗ್ರಾಮೀಣ ಜನಸಂಖ್ಯೆ ಕುಗ್ಗುತ್ತದೆಂದು ನಿರೀಕ್ಷಿಸಲಾಗಿದೆ.

[xiii] ಉದ್ಯಮಗಳಲ್ಲಿ 1 ಲಕ್ಷಕ್ಕಿಂತ ಹೆಚ್ಚು ಸ್ಥಿರ ಹೂಡಿಕೆಯನ್ನು ಹೊಂದಿರುವ ಸ್ವಂತ ಖಾತೆಯ ಉದ್ಯಮಗಳು (ಓಎಇ) ಕೇವಲ ಶೇ. 8ರಷ್ಟಿದ್ದು, ಶೇ. 37ರಷ್ಟು ಉದ್ಯಮಗಳು 5,000 ರೂ.ಗಳಿಗಿಂತ ಕಡಿಮೆ ಸರಾಸರಿ ಮೌಲ್ಯದ ಸ್ಥಿರ ಆಸ್ತಿಗಳನ್ನು ಹೊಂದಿದ್ದವು. 1999-2000ದಲ್ಲಿ, ನಗರದ ಶೇ. 60ರಷ್ಟು ಅನೌಪಚಾರಿಕ ಓಎಇಗಳು ಯಾವ ಸ್ಥಿರಾಸ್ತಿಯನ್ನೂ ಬಾಡಿಗೆಗೆ ಗೊತ್ತುಮಾಡಿಕೊಂಡಿರಲಿಲ್ಲ. ಹೀಗಾಗಿ ಕೃಷಿಯೇತರ ಓಎಇಗಳ ಬಹುದೊಡ್ಡ ಭಾಗವು ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಕಾರ್ಯಾಚರಣೆಯ ಪ್ರಮಾಣವನ್ನು ಪ್ರತಿಬಿಂಬಿಸುತ್ತದೆ.

[xiv] 1999-2000ದಲ್ಲಿ ಕೃಷಿಯೇತರ ಓಎಇಗಳಲ್ಲಿ ತಲಾವಾರು ಕೆಲಸಗಾರನು ಸೇರಿಸುವ ಸರಾಸರಿ ಒಟ್ಟು ಮೌಲ್ಯವು 1167 ರೂ.ಗಳಷ್ಟಿತ್ತು. ಹೀಗೆ, ಗ್ರಾಮೀಣ ಕೃಷಿಯೇತರ ಸ್ವಯಂ-ಉದ್ಯೋಗವು ಸೃಜಿಸಿದ ಆದಾಯವು ಅಂಚಿನಲ್ಲಿರುವ ಹಾಗೂ ಸಣ್ಣ ರೈತರ ಆದಾಯಗಳ ನಡುವಿನಲ್ಲಿದೆ.

[xv] "ವಿಶ್ವದಾದ್ಯಂತ ಕೈಗೊಂಡ ಪ್ರಕರಣ ಅಧ್ಯಯನಗಳು ಕಳಪೆ ಪ್ರದೇಶಗಳಲ್ಲಿನ, ಎತ್ತರದ ಕಟ್ಟಡಗಳಲ್ಲಿ ಪುನರ್ವಸತಿ ಯೋಜನೆಗಳ ಅಸಮರ್ಪಕತೆಯನ್ನು ದಾಖಲಿಸಿವೆ. ಬಡವರು ಜೀವನಾಧಾರಕ್ಕಾಗಿ ಅವಲಂಬಿಸಿರುವ ಸಾಮಾಜಿಕ ಮತ್ತು ಆರ್ಥಿಕ ಜಾಲಗಳನ್ನು ಎತ್ತರದ ಕಟ್ಟಡಗಳಲ್ಲಿ ಮುಂದುವರೆಸಲಾಗುವುದಿಲ್ಲ. ಧಾರಾವಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಮನೆ ಆಧಾರಿತ ಆರ್ಥಿಕ ಚಟುವಟಿಕೆಗಳಿಗೆ ಎತ್ತರದ ಕಟ್ಟಡದ ಯೋಜನೆಗಳು ಸಮರ್ಪಕವಲ್ಲ. ಈ ಪುನರಭಿವೃದ್ಧಿಯ ಯೋಜನೆಯಲ್ಲಿ ಮಾಡಬಹುದಾದ ಕನಿಷ್ಠ ಕೆಲಸವೆಂದರೆ, ಅಸ್ತಿತ್ವದಲ್ಲಿರುವ ಕೈಗಾರಿಕೆಗಳ ಕಾರ್ಯಕ್ಷೇತ್ರಗಳನ್ನು ವಸತಿ ಪ್ರದೇಶಗಳ ವ್ಯಾಪ್ತಿಯಲ್ಲಿ ನವೀಕರಿಸುವುದು ಮತ್ತು ಮನೆ ಆಧಾರಿತ ಉದ್ಯೋಗಗಳಲ್ಲಿ ತೊಡಗಿರುವ ಕುಟುಂಬಗಳಿಗೆ ಕಡಿಮೆ ಎತ್ತರವಿರುವ, ಉನ್ನತ ಸಾಂದ್ರತೆಯುಳ್ಳ ಸಾಲು ಮನೆಗಳನ್ನು ಒದಗಿಸುವುದು. ಈ ರೀತಿಯಲ್ಲಿ ಪ್ರತಿಯೊಂದು ಮನೆಯೂ ಮನೆ ಆಧಾರಿತ ಉದ್ಯಮದ ಚಟುವಟಿಕೆಯನ್ನು ನಡೆಸಲಾಗುವಂತೆ ನೆಲ ಅಂತಸ್ತು, ಹೆಚ್ಚುವರಿ ಮಹಡಿ, ತಾರಸಿ ಮಾಡು ಮತ್ತು ಅಂಗಳವನ್ನು ಹೊಂದಿರುತ್ತದೆ" (ಆಪ್ಟೆ 2008).

## REFERENCES


Apte, Prakash (2008): "Dharavi: India's Model Slum", http://www. planetizen. com/node/35269 (last accessed on 12 March 2009).

Basu, Pranab Kanti (2007): "The Politics of Land Grab", *Economic & Political Weekly*, 42 (14): 1281-87.

Bromley, Ray (1990): "A New Path to Development? The Significance and Impact of Hernando de Soto's Ideas on Underdevelopment, Production, and Reproduction", *Economic Geography*, Vol 66, No 4, October, 328-48.

Chatterjee, Roma (2005): "Plans, Habitation and Slum Redevelopment: The Production of Community in Dharavi, Mumbai", *Contributions to Indian Sociology*, 39; 197-218.

Chayanov, A V (1987): *The Theory of Peasant Economy* (New Delhi: Oxford University Press).

Davis, Mike (2004): "The Planet of Slums", *New Left Review*, 26, March-April, 5-34.

De Soto, Hernando (1989): *The Other Path: The Invisible Revolution in the Third World* (New York: Harper and Row).

Fine, J (2006): *Workers Centers: Organising Communities at the Edge of the Dream* (London: ILR Press).

Gerry, Chris (1987): "Developing Economies and the Informal Sector in Historical Perspective", *Annals of the American Academy of Political and Social Science*, Vol 493, The Informal Economy, September, 100-19.

Harvey, David (2005): *The New Imperialism* (USA: Oxford University Press).

Harris, J R and M P Todaro (1970): "Migration, Unemployment and Development: A Two-Sector Analysis", *American Economic Review*, 60: 126-42.

Hart, K (1973): "Informal Income Opportunities and Urban Employment in Ghana", *Journal of Modern African Studies*, Vol 11 (1).

ILO (1991): "The Dilemma of the Informal Sector", Report of the Director General (Part I) to the International Labour Conference 78th Session.

Lewis, W A (1954): "Economic Development with Unlimited Supplies of Labour", Manchester School, 28:139-91.

Marx, K (1983): *Capital*, Vol I (Moscow: Progress Publishers).

McGee, T G (1973): "Peasants in Cities: A Paradox, A Paradox, A Most Ingenious Paradox", *Human Organisation*, Vol 32: 135-42.

Menon, Meena (2008): "Supreme Court Order Cheers Dharavi Residents", *The Hindu*, 6 April, Internet edition (last accessed on 12 March 2009) http:// www. hindu.com/2008/04/06/stories/2008040659271100.htm

Ministry of Finance (2008): *Economic Survey 2007-08* (New Delhi: Government of India).

Moser, Caroline (1978): "Informal Sector or Petty Commodity Production? Dualism or Dependence in Urban Development?", *World Development*, 6 (9-10).

NCEUS (2007): Report on Conditions of Work and Promotion of Livelihoods in the Unorganised Sector, National Commission for Enterprises in the Unorganised Sector, August, Government of India.

NSSO (2001): "Informal Sector in India: Salient Features Employment-Unemployment Situation in India 1999-2000", Round 55th, Report No 459 (55/2.0/2), Ministry of Statistics and Programme Implementation (New Delhi: Government of India).

– (2006): "Employment-Unemployment Situation in India 2004-2005", Round 61st, Report No 515 (61/10/1) Part I, Ministry of Statistics and Programme Implementation (New Delhi: Government of India).

Nun, Jose (2000): "The End of Work and the Marginal Mass Thesis", *Latin American Perspectives*, Vol 27, No 1, 6-32.

Quijano, Anibal and Peggy Westwell (1983): "Imperialism and Marginality in Latin America", *Latin American Perspectives*, Vol 10, Nos 2-3: 76-85.

Ramachandran, Sudha (2008): "Dharavi – Rising to a Foggy Dawn", http://dayafterindia. com/may208/states1.html (last accessed 12 March 2009).

Ranis, Gustav and Frances Stewart (1999): "V-Goods and the Role of the Urban Informal Sector in Development", *Economic Development and Cultural Change*; January, 47, 2: 259-88.

Ray, Debraj (1999): *Development Economics*, Oxford University Press.

Sanyal, Kalyan (2007): *Rethinking Capitalist Development: Primitive Accumulation, Governmentality and Post-Colonial Capitalism* (New Delhi: Routledge).

Silver, B (2003): *Forces of Labour: Worker's Movements and Globalisation since 1870* (Cambridge: Cambridge University Press).

UN-Habitat (2003): *The Challenge of the Slums: Global Report on Human Settlements 2003* (London: United Nations Human Settlements Programme).

Webster, E, R Lambert and A Bezuidenhout (2008): *Grounding Globalisation: Labour in the Age of Insecurity* (London: Blackwell Publishers).

Wright, Eric Olin (2000): "Working-Class Power, Capitalist-Class Interests and Class Compromise", *American Journal of Sociology*, Vol 105 (4), January, 957-1002.